بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 50

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

16 ಡಿಸೆಂಬರ್ 2021, 16 ಫತಹ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
11 ಜಮಾದಿ ಉಲ್‌ಅವ್ವಲ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَقَالُوْا لَوْلَاۤ اُنْزِلَ عَلَيْهِ مَلَكٌ ؕ
وَلَوْ اَنْزَلْنَا مَلَكًا لَّقُضِىَ الْاَمْرُ
ثُمَّ لَا يُنْظَرُوْنَ۝

(ಅಲ್‌ಅನ್‌ಆಂ : 09)

ಅಂದರೆ: . 'ಅವನ ಬಳಿಗೆ ಓರ್ವ ದೇವದೂತ (ಮಲಕ್) ಏಕೆ ಇಳಿಸಲ್ಪಡುವುದಿಲ್ಲ?' ಎಂದು ಅವರು ಹೇಳುತ್ತಾರೆ. ಆದರೆ ನಾವು ಒಬ್ಬ ದೇವದೂತನನ್ನು ಕಳುಹಿಸಿದ್ದರೆ ಸಂಗತಿ ಇತ್ಯರ್ಥವಾಗುತ್ತಿತ್ತು. ಆ ಮೇಲೆ ಅವರಿಗೆ ಕಾಲಾವಕಾಶ ನೀಡಲಾಗುತ್ತಿರಲಿಲ್ಲ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಜ್ರೆ ಅಸ್ವದನ್ನು ಚುಂಬಿಸುವುದು

(1597) ಹಝ್ರತ್ ಉಮರ್(ರ) ವರದಿ ಮಾಡುತ್ತಾರೆ. ಅವರು ಹಜರೆ ಅಸ್ವದ್ (ಕಪ್ಪುಕಲ್ಲು) ಬಳಿ ಬಂದರು. ಅದನ್ನು ಚುಂಬಿಸಿದರು. ಮತ್ತು ಹೇಳಿದರು. ನಾನು ಚೆನ್ನಾಗಿ ಬಲ್ಲೆನು ನೀನು ಒಂದು ಕಲ್ಲು ಮಾತ್ರ, ನಷ್ಟ ಉಂಟು ಮಾಡಲು ಸಾಧ್ಯವಿಲ್ಲ, ಲಾಭ ಕೊಡಲು ಸಾಧ್ಯವಿಲ್ಲ, ನಾನು ನಬಿ(ಸ) ರವರು ನಿನ್ನನ್ನು ಚುಂಬಿಸುವುದನ್ನು ಕಾಣುತ್ತಿರಲಿಲ್ಲವಾದರೆ ನಾನು ಎಂದಿಗೂ ನಿನಗೆ ಚುಂಬಿಸುತ್ತಿರಲಿಲ್ಲ.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಈ ಹದೀಸಿನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಬಹುದೇವಾರಾಧಕ ಸಮುದಾಯಗಳು ಅರಬರಾಗಲೀ ಅರಬೇತರರಾಗಲೀ, ಸ್ಥಾಪಿಸಿದ ಕಲ್ಲುಗಳನ್ನು ಪೂಜಿಸುತ್ತಿದ್ದರು. ಅದನ್ನು ಲಾಭ-ನಷ್ಟ ಉಂಟು ಮಾಡುವ ಮಾಲೀಕರೆಂದು ಭಾವಿಸುತ್ತಿದ್ದರು. ಹಝ್ರತ್ ಉಮರ್(ರ) ಅವರು ಬಹುದೇವರಾಧಕರ ಭಾವನೆಗಳನ್ನು ರದ್ದುಪಡಿಸುತ್ತಿದ್ದಾರೆ. ಏಕೆಂದರೆ ಅಜ್ಞಾನಿ ಮುಸಲ್ಮಾನರು ಈ ಕಲ್ಲಿನ ಬಗ್ಗೆ ತಪ್ಪು ಕಲ್ಪನೆ ಹೊಂದಿರಬಾರದು. ಆರಾಧನೆಯಲ್ಲಿ, ಸ್ತುತಿ, ಸ್ಮರಣೆ, ವಿನಯ, ಭರವಸೆ, ಹೆದರಿಕೆ ಮತ್ತು ದುಆ ಒಳಗೊಂಡಿರುತ್ತದೆ. ಇವುಗಳಲ್ಲಿ ಯಾವುದು ಸಹ ಹಜರೆ ಅಸ್ವದ್ ಚುಂಬಿಸಲಿಕ್ಕೆ ಅಥವಾ ಸ್ಪರ್ಶಿಸುವುದಕ್ಕೆ ಕಾರಣವಲ್ಲ. ಹಜರೆ ಅಸ್ವದ್ ಚುಂಬಿಸುವುದಕ್ಕೆ ಮತ್ತು ಸ್ಪರ್ಶಿಸುವುದಕ್ಕೆ ಯಾವ ವೈಶಿಷ್ಟತೆ ಇಲ್ಲ, ಅಲ್ಲದೇ ಕೆಲ ವರದಿಗಳಿಂದ ತಿಳಿದು ಬರುವುದೇನೆಂದರೆ "ರುಕುನೆ ಯಮಾನಿ" ಯನ್ನು ಸಹ ಚುಂಬಿಸಲಾಗುತ್ತಿತ್ತು.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

**ನಾನು ಸತ್ಯವಾಗಿ ಹೇಳುತ್ತೇನೆ. ಅಬೂಬಕರ್ ಸಿದ್ದೀಖ್ ಇಸ್ಲಾಮಿಗೋಸ್ಕರ ದ್ವಿತೀಯ ಆಗಮನವಾಗಿದ್ದಾರೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಚರಿತ್ರೆಯ ವ್ಯಾಖ್ಯಾನ ಅವರ ಮೇಲಿತ್ತು ಮತ್ತು ಅವರ ಹೃದಯವು ವಿಶ್ವಾಸದ ಪ್ರಕಾಶದಿಂದ ತುಂಬಿಹೋಗಿತ್ತು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಆ ಕಾಲದಲ್ಲಿಯೂ ಮುಸೈಲಮನು ಜನರಿಗೆ ವಿದ್ರೋಹಕ್ಕಾಗಿ ಓಗೋಡಿಸಿದ್ದನು. ಅಂತಹ ಸಮಯದಲ್ಲಿ ಹಝ್ರತ್ ಅಬೂಬಕರ್ ಖಲೀಫರಾದರು. ಜನರು ಭಾವಿಸಬಹುದು ಏನೆಲ್ಲಾ ಕಷ್ಟಗಳು ಎದುರಾಗಿರಬಹುದೆಂದು. ಅವರ ದೃಢಚಿತ್ತ ಹೊಂದಿದವರು ಆಗಿರದಿದ್ದರೆ, ಮತ್ತು ಅವರ ವಿಶ್ವಾಸ ಪೈಗಂಬರ(ಸ) ರವರ ರೀತಿಯ ವಿಶ್ವಾಸವಲ್ಲದಿದ್ದರೆ ತುಂಬಾ ಕಷ್ಟವಾಗುತಿತ್ತು ಮತ್ತು ಗಾಬರಿಗೊಳ್ಳುತ್ತಿದ್ದರು. ಆದರೆ ಸಿದ್ದೀಖ್(ರ) ನಬಿ(ಸ) ರವರ ಮಿತ್ರರಾಗಿದ್ದರು. ಅವರ ಚರಿತ್ರೆಯ ಪ್ರಭಾವ ಅವರ ಮೇಲಿತ್ತು ಮತ್ತು ಅವರ ಹೃದಯ ವಿಶ್ವಾಸದ ಪ್ರಕಾಶದಿಂದ ತುಂಬಿ ಹೋಗಿತ್ತು. ಆದುದರಿಂದ ಅವರ ಸಾಹಸ, ಶೌರ್ಯ ಹಾಗೂ ಸ್ಥಿರತೆಯು, ಹಝ್ರತ್ ರಸೂಲುಲ್ಲಾಹ್(ಸ) ರವರ ನಂತರ, ಇಂದಿಗೂ ಅದರ ಉದಾಹರಣೆಯಿಲ್ಲದಂತಹ ಮಾದರಿ ತೋರಿಸಿದರು. ಅವರ ಮೃತ್ಯು ಇಸ್ಲಾಮಿನ ಜೀವಿತವಾಗಿತ್ತು. ಆ ಕುರಿತು ಹೆಚ್ಚಿನ ಚರ್ಚೆಯ ಅವಶ್ಯಕತೆಯೇ ಇಲ್ಲ. ಆ ಕಾಲದ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿದರೆ ತಿಳಿಯಬಹುದು. ಅವರು ಇಸ್ಲಾಮಿಗೋಸ್ಕರ ಮಾಡಿದ ಸೇವೆಗಳನ್ನು ಅಂದಾಜಿಸಬಹುದು. ನಾನು ಸತ್ಯವಾಗಿ ಹೇಳುತ್ತೇನೆ. ಅಬೂಬಕರ್ ಸಿದ್ದೀಖ್-ಇಸ್ಲಾಮಿಗೋಸ್ಕರ ದ್ವಿತೀಯ ಆದಮರಾಗಿದ್ದರು. ನನಗೆ ದೃಢವಾದ ನಂಬಿಕೆಯಿದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ನಂತರ ಅಬೂಬಕರ್ ಸಿದ್ದೀಖ್(ರ) ರವರು ಇರುತ್ತಿರಲಿಲ್ಲವಾದರೆ ಇಸ್ಲಾಂ ಸಹ ಇರುತ್ತಿರಲಿಲ್ಲ. ಅಬೂಬಕರ್ ಸಿದ್ದೀಖ್ ಇಸ್ಲಾಮ್ ಧರ್ಮಕ್ಕೆ ಪುನಶ್ಚೇತನ ನೀಡಿರುವರು. ಅದು ಅವರ ಬಹು ದೊಡ್ಡ ಉಪಕಾರವಾಗಿದೆ. ತಮ್ಮ ದೃಢವಿಶ್ವಾಸದಿಂದಾಗಿ ವಿದ್ರೋಹಿಗಳಿಗೆ ಶಿಕ್ಷೆ ನೀಡಿದರು ಮತ್ತು ಶಾಂತಿಯನ್ನು ಸ್ಥಾಪಿಸಿದರು. ಅಲ್ಲಾಹನ ವಾಗ್ದಾನ ಪ್ರಕಾರವೇ "ನಾನು ಸತ್ಯಸಂಧ ಖಲೀಫರ ಮೇಲೆ ಶಾಂತಿಯನ್ನು ಕರುಣಿಸುವೆನು." ಈ ಭವಿಷ್ಯವಾಣಿ ಹಝ್ರತ್ ಅಬೂಬಕರ್(ರ) ಅವರ ಖಿಲಾಫತ್ತಿನಲ್ಲಿ ಈಡೇರಿತು. ಅದಕ್ಕೆ ಭೂಮ್ಯಾಕಾಶಗಳೇ ಸಾಕ್ಷಿಯಾದವು. ಅಂದಹಾಗೆ ಅದು ಸಿದ್ದೀಖರ ಮಹಾನತೆಯಾಗಿದೆ. ಅವರಲ್ಲಿ ಅವರ್ಣನಿಯ ನಿಷ್ಠೆ ಮತ್ತು ಸತ್ಯ ತುಂಬಿ ತುಳುಕುತಿತ್ತು. ಅದರಿಂದ ಹಲವು ಸಮಸ್ಯೆಗಳು ಬಹುಬೇಗ ಪರಿಹಾರಗೊಂಡವು.

**(ಮಲ್‌ಫೂಝಾತ್, ಸಂಪುಟ-1, ಪುಟ-344, ಮುದ್ರಣ ಖಾದಿಯಾನ್ 2018)**

**ಅಲ್ಲಾಹನ ಕಡೆಯಿಂದ ಯಾವುದೇ ವಾಗ್ದಾನವಿದ್ದರೆ ವಿಶೇಷ ರೀತಿಯಲ್ಲಿ ಪ್ರಾರ್ಥನೆಗೆ ತೊಡಗಿರಬೇಕು ಮತ್ತು ಆರಾಧನೆಯಲ್ಲಿ ತೊಡಗಬೇಕು. ಏಕೆಂದರೆ ಆ ವಾಗ್ದಾನವು ಎಲ್ಲ ರೀತಿಯ ಒಳಿತಿನೊಂದಿಗೆ ಪೂರ್ಣವಾಗಲಿ, ಅದರ ಅರ್ಥ ಬೇರೆ ದಿನಗಳಲ್ಲಿ ಅವನ ಆರಾಧನೆ ಬಿಟ್ಟುಬಿಡಬೇಕೆಂದೇನಿಲ್ಲ. ಬದಲು ಅದರ ಅರ್ಥ ಮಾಮೂಲಿಗಿಂತ ಹೆಚ್ಚು ಆರಾಧನೆಯತ್ತ ಗಮನವಿರಬೇಕು ಎಂದು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಅಲ್-ಹಿಜರ್ ವಚನ 100 **"ವಅ್‌ಬುದೂ ರಬ್ಬಕ ಹತ್ತಾ ಯಾತೀಯುಕಲ್ ಯಖೀನ್."** ನ ವ್ಯಾಖ್ಯಾನಾ ಮಾಡುತ್ತಾ ಹೇಳುತ್ತಾರೆ. "ಯಖೀನ್" ಅರ್ಥ ಇಲ್ಲಿ "ಮರಣ" ಎಂದಾಗಿದೆ. ಹೇಳುತ್ತಾರೆ. ನಿನಗೆ ಮರಣ ಬರುವವರೆಗೆ ನೀನು ನಿನ್ನ ಪ್ರಭುವನ್ನೇ ಆರಾಧಿಸು. ಅಂದರೆ ಇದೀಗ ಇಸ್ಲಾಂ ಧರ್ಮದ ಪ್ರಗತಿಯಲ್ಲಿ ಯಾವುದೇ ತಡೆ ಇರುವುದಿಲ್ಲ. ನೀನು ಆರಾಮವಾಗಿ ನಿನ್ನ ಮರಣದವರೆಗೆ ನಿಸ್ಸಂಕೋಚವಾಗಿ ಅಲ್ಲಾಹನನ್ನು ಆರಾಧಿಸಬಹುದು. ಯಾರೂ ಈ ಸಮಯ ನಿನ್ನ ಆರಾಧನೆಗೆ ಅಡ್ಡಿಪಡಿಸುವರೋ ಅವರನ್ನು ಅಲ್ಲಾಹನು ನಾಮಾವಶೇಷ ಮಾಡುವನು. ನಿನ್ನ ಜೀವನವೆಲ್ಲ ಸ್ವಾತಂತ್ರ್ಯವಾಗಿ ಆರಾಧನೆಯಲ್ಲಿ ಕಳೆಯುವುದು.

"ಯಖೀನ್" ಎಂಬುದಕ್ಕೆ ಒಳಾರ್ಥವು ಇಲ್ಲಿ ಹೀಗಾಗುತ್ತದೆ. ಆ ವಾಗ್ದಾನ ಮಾಡಿದ ಫಳಿಗೆ ಬರುವವರೆಗೆ ವಿಶೇಷ ರೀತಿಯಲ್ಲಿ ಆರಾಧನೆಯಲ್ಲಿ ತೊಡಗಿರು. ಅಂದರೆ ಶಿಕ್ಷೆ ಅಥವಾ ಪ್ರಳಯ ಜಾರಿಯಾಗುವುದಕ್ಕೆ ಯಖೀನ್ ಅನ್ನುತ್ತಾರೆ. ಏಕೆಂದರೆ ವಾಗ್ದಾನ ಪೂರ್ಣ ಆಗುವವರೆಗೆ ಅದರ ಯಥಾರ್ಥತೆ ಕಾಣದು. ಆದುದರಿಂದ ಹೇಳಿದರು. ಅಲ್ಲಾಹನಿಂದ ವಾಗ್ದಾನವಿರುವಾಗ ವಿಶೇಷ ರೀತಿಯಲ್ಲಿ ಪ್ರಾರ್ಥನೆ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*


**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**
**Love for All, Hatred for None**

MUSLIM TELEVISION AHMADIYYA INTERNATIONAL
www.mta.tv

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ನನ್ನ ಅನೇಕ ಭವಿಷ್ಯವಾಣಿಗಳು ಸುಳ್ಳಾಗಿವೆ ಎಂಬುದು ಶೇಖ್ ಮುಹಮ್ಮದ್ ಹುಸೈನ್ ಬಟಾಲ್ವಿಯ ಸುಳ್ಳು ದಾವೆ ಆಗಿದೆ, ಆತನು ನನ್ನ ಭವಿಷ್ಯವಾಣಿಗಳನ್ನು ಸುಳ್ಳಾಗಿದೆ ಎಂದು ಸಾಬೀತುಪಡಿಸಿದರೆ ನಾನು ಆತನ ಪ್ರತಿ ಭವಿಷ್ಯವಾಣಿಗೆ 100 ರೂಪಾಯಿ ನಗದು ನೀಡುತ್ತೇನೆ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಈ ಬಹುಮಾನದ ಪಂಥಹ್ವಾನವನ್ನು ತಮ್ಮ ಗ್ರಂಥವಾದ "ಅಲ್–ಇಸ್ತಿಫ್ತಾ" ರೂಹಾನಿ ಖಝಾಇನ್ ಸಂಪುಟ–12ರಿಂದ ಪ್ರಸ್ತುತ ಪಡಿಸುತ್ತಿದ್ದೇವೆ. "ಇಫ್ತಾ" ಅಥವಾ "ಅಲ್–ಇಫ್ತಾ" ಫತ್ವಾವನ್ನು ನೀಡುವುದು ಎಂದು ಹೇಳಲಾಗುತ್ತದೆ. ಇದರಿಂದಲೇ "ದಾರುಲ್‌ಇಫ್ತಾ" ಇರುವುದು ಅಂದರೆ ಫತ್ವಾವನ್ನು ಹೊರಡಿಸುವ ಸಂಸ್ಥೆ. ಇದರ ಕತೃ ಪದ ಮುಫ್ತಿಯಾಗಿದೆ ಅದರ ಅರ್ಥ ಫತ್ವ ನೀಡುವವನು ಮತ್ತು "ಇಸ್ತಿಫ್ತಾ" ಅಥವಾ "ಅಲ್–ಇಸ್ತಿಫ್ತಾ" ಎಂದರೆ ಬೇರೆಯವರಿಂದ ಫತ್ವ ಬಯಸುವುದು ಎಂದರ್ಥ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು 20ನೇ ಫೆಬ್ರವರಿ 1893 ರಂದು ಪಂಡಿತ್ ಲೇಖ್‌ರಾಮ್ ಬಗ್ಗೆ ಭವಿಷ್ಯವಾಣಿಯನ್ನು ನುಡಿದಿದ್ದರು, ಇವನು ಇಂದಿನಿಂದ ಆರು ವರ್ಷಗಳೊಳಗೆ ಯಾವುದೇ ಸಮಯದಲ್ಲಿ ಮರಣಹೊಂದುವನು ಎಂದು. ಅವರು ಆರು ವರ್ಷಗಳಿಗಿಂತ ಹೆಚ್ಚು ಕಾಲಾವಧಿ ಅವನಿಗೆ ಸಿಗುವುದಿಲ್ಲ. ಭವಿಷ್ಯವಾಣಿಯ ಅದ್ಭುತವಾದ ಪದಗಳು ಹೀಗಿವೆ:

"ಸರ್ವಶಕ್ತನಾದ ಅಲ್ಲಾಹನು ನನಗೆ ಬಹಿರಂಗಗೊಳಿಸಿರುವುದೇನೆಂದರೆ ಇಂದಿನ ದಿನಾಂಕ 20 ಫೆಬ್ರವರಿ 1893 ರಿಂದ ಆರು ವರ್ಷಗಳ ಕಾಲದೊಳಗೆ ಈ ವ್ಯಕ್ತಿಯು ಅವನ ಕೆಟ್ಟ ಭಾಷೆಗಾಗಿ, ಅಂದರೆ, ಪ್ರವಾದಿ ಮುಹಮ್ಮದ್(ಸ)ರ ಮೇಲೆ ಮಾಡಿದ ಅಸಭ್ಯತೆಗಾಗಿ ಘೋರ ಶಿಕ್ಷೆಗೆ ಪಾತ್ರನಾಗುವನು. ಹಾಗಾಗಿ ಈಗ ನಾನು ಈ ಭವಿಷ್ಯವಾಣಿಯನ್ನು ಪ್ರಕಟಿಸಿ ಅದನ್ನು ಎಲ್ಲಾ ಮುಸ್ಲಿಮರು, ಆರ್ಯರು, ಕ್ರಿಶ್ಚಿಯನ್ನರು ಮತ್ತು ಇತರ ಪಂಗಡಗಳಿಗೆ ವ್ಯಕ್ತಪಡಿಸುವುದೇನೆಂದರೆ ಇಂದಿನಿಂದ ಆ ವ್ಯಕ್ತಿಯ ಮೇಲೆ ಆರು ವರ್ಷಗಳ ಕಾಲಾವಧಿಯಲ್ಲಿ ಅಸಾಧಾರಣ ಶಿಕ್ಷೆ ಮತ್ತು ಆ ಶಿಕ್ಷೆಯಲ್ಲಿ ದೈವಿಕ ರೂಪ ಕಾಣಿಸಿಕೊಳ್ಳದಿದ್ದರೆ ಮತ್ತು ನಿಮ್ಮಲ್ಲಿ ಅಲ್ಲಾಹನ ಭಯವಿದ್ದರೆ, ನಾನು ಸರ್ವಶಕ್ತನಾದ ಅಲ್ಲಾಹನಿಂದ ಬಂದವನಲ್ಲ ಅಥವಾ ಇದು ಆತನ ಆತ್ಮದಿಂದ ನನ್ನ ಭಾಷಣವಲ್ಲ ಎಂದು ಅರ್ಥಮಾಡಿಕೊಳ್ಳಿ. ಒಂದು ವೇಳೆ ನಾನು ಈ ಭವಿಷ್ಯವಾಣಿಯಲ್ಲಿ ಸುಳ್ಳುಗಾರನಾಗಿದ್ದರೆ ನಾನು ಎಲ್ಲಾ ರೀತಿಯ ಶೀಕ್ಷೆಯನ್ನು ಅನಿಭವಿಸಲು ಸಿದ್ಧನಿದ್ದೇನೆ. ಅಂದರೆ ನನ್ನ ಕುತ್ತಿಗೆಗೆ ಹಗ್ಗವನ್ನು ಕಟ್ಟಿ ಶಿಲುಬೆಗೆ ಏರಿಸಬೇಕು ಎಂದು ಒಪ್ಪಿಕೊಳ್ಳುತ್ತೇನೆ. ಹೀಗೆ ನನ್ನ ಒಪ್ಪಿಗೆಯ ನಂತರವೂ ಸ್ಪಷ್ಟವಾಗುವುದೇನೆಂದರೆ ಒರ್ವ ವ್ಯಕ್ತಿಯ ಭವಿಷ್ಯವಾಣಿಗಳು ಸುಳ್ಳಾಗುವುದು ಅವನಿಗೆ ಅವಮಾನವಾಗುವುದು, ಇದಕ್ಕಿಂತ ಹೆಚ್ಚು ನಾನು ಏನು ಬರೆಯಲಿ. (ಮಜ್‌ಮುಅ ಇಶ್ತಿಹಾರಾತ್, ಸಂಪುಟ–1, ಪುಟ–393, ಆವೃತ್ತಿ 2019, ಮುದ್ರಿತ ಖಾದಿಯಾನ್)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಡಿಟಿಪ್ಪಣಿಯಲ್ಲಿ ಬರೆದಿದ್ದಾರೆ: "ಈಗ ಆರ್ಯರು ತಮ್ಮ ವಕೀಲರಿಂದ ಈ ಶಿಕ್ಷೆಯನ್ನು ತಪ್ಪಿಸಲು ಒಟ್ಟಾಗಿ ಪ್ರಾರ್ಥಿಸಬೇಕು."

ಭವಿಷ್ಯವಾಣಿಯ ಪ್ರಕಾರ, ಪಂಡಿತ್ ಲೇಖ್ ರಾಮ್ ಮಾರ್ಚ್ 6, 1897 ರಂದು ಸರಿಯಾಗಿ ನಾಲ್ಕು ವರ್ಷಗಳ ನಂತರ ನಿಧನನಾದನು. ಭವಿಷ್ಯವಾಣಿಯು ಪ್ರಕಾಶಮಾನವಾದ ದಿನದಂತೆ ನೆರವೇರಿತು, ಆದರೆ ಆರ್ಯರು ಇದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಪಿತೂರಿ ಎಂದು ಕರೆದರು. ಮುಸ್ಲಿಂ ವಿದ್ವಾಂಸರು ಆರ್ಯರೊಂದಿಗೆ ಸೇರಿಕೊಂಡು ಅವರೊಂದಿಗೆ ಹೌದು ಎಂದು ಹೇಳಿದರು ಇದು ಬಹಳ ದುಃಖದ ವಿಷಯವಾಗಿದೆ. ಮುಹಮ್ಮದ್ ಹುಸೇನ್ ಬಟಾಲ್ವಿ ಅವರು ಭವಿಷ್ಯವಾಣಿಯು ನೆರವೇರಲಿಲ್ಲ ಎಂದು ಬರೆದಿದ್ದಾರೆ, ಆದರೆ ಇದು ಪಂಡಿತ್ ಲೇಖ್ ರಾಮ್ ಮತ್ತು ವಾಗ್ದತ್ತ ಮಸ್ಸಿಹ್(ಅ) ಅವರ ನಡುವಿನ ವೈಯಕ್ತಿಕ ಯುದ್ಧವಿರಲಿಲ್ಲ, ಬದಲಿಗೆ ಇದು ಇಸ್ಲಾಂ ಮತ್ತು ಆರ್ಯರ ನಡುವಿನ ಅತ್ಯಂತ ಅದ್ಭುತವಾದ ಆಧ್ಯಾತ್ಮಿಕ ಯುದ್ಧವಾಗಿದೆ ಎಂದು ಮುಸ್ಲಿಂ ವಿದ್ವಾಂಸರು ಭಾವಿಸಬೇಕು. ಇದರಲ್ಲಿ ಇಸ್ಲಾಮ್ ಧರ್ಮವು ದೊಡ್ಡ ವಿಜಯವನ್ನು ಸಾಧಿಸಿ ಹಿಂದೂ ಧರ್ಮವನ್ನು ಸೋಲಿಸಲಾಯಿತು. ಆದರೆ ಈ ವಿದ್ವಾಂಸರು ಎಷ್ಟು ಶೋಕಿಸುವುದು, ಅವರೆಲ್ಲರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ವಿರೋಧಿಸುವುದರಲ್ಲಿ ಇಸ್ಲಾಮ್ ಧರ್ಮದ ಗೌರವವನ್ನು ಸಹ ಪರಿಗಣಿಸಲಿಲ್ಲ, ಭವಿಷ್ಯವಾಣಿಯನ್ನು ಪೂರ್ಣಗೊಳ್ಳಲಿಲ್ಲ ಎಂದು ಸಾಬೀತುಪಡಿಸುವುದರಲ್ಲಿ ಅತ್ಯಂತ ಶ್ರಮವಹಿಸಿದರು.

ಇಂತಹ ಪರಿಸ್ಥಿತಿಯಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಲೇಖ್ ರಾಮ್ ಬಗ್ಗೆ ಅವರ ಭವಿಷ್ಯವಾಣಿಯು ಪ್ರಕಾಶಮಾನವಾದ ದಿನದಂತೆ ನೆರವೇರಿದೆಯೇ ಅಥವಾ ಇಲ್ಲವೇ ಎಂಬುದರ ಕುರಿತು ಜನರನ್ನು ಫತ್ವಾ ಕೇಳಲು ಈ ಕರಪತ್ರವನ್ನು ಪ್ರಕಟಿಸಿದ್ದಾರೆ. ಜನರು ಸುಲಭವಾಗಿ ಫತ್ವಾ ನೀಡಲಿ ಎಂದು ಬಹಳ ಸ್ಪಷ್ಟವಾಗಿ ಸಂಪೂರ್ಣ ವಿವರಗಳನ್ನು ತಮ್ಮ ಪುಸ್ತಕದಲ್ಲಿ ನೀಡಿದ್ದಾರೆ. ಈ ಕಾರಣಕ್ಕಾಗಿ, ಅವರು ಈ ಪುಸ್ತಕಕ್ಕೆ "ಅಲ್–ಇಸ್ತಿಫ್ತಾ" ಎಂದು ಹೆಸರಿಸಿದರು. ಈ ಕುರಿತು ಅವರು ಸುಮಾರು ನಾಲ್ಕು ಸಾವಿರ ಜನರಿಂದ ಪತ್ರಗಳನ್ನು ಸ್ವೀಕರಿಸಿದರು ಮತ್ತು ಲೇಖ್ ರಾಮ್‌ನ ಬಗ್ಗೆ ಪ್ರಕಟವಾದ ಭವಿಷ್ಯವಾಣಿಯು ನೆರವೇರಿತು ಮತ್ತು ಇದನ್ನು ಪಿತೂರಿಯಡಿಯಲ್ಲಿ ಕೊಲೆ ಎಂದು ಕರೆಯುವುದು ತಪ್ಪು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ಅದರಲ್ಲಿ 279 ಹೆಸರುಗಳನ್ನು ಅವರ ಪುಸ್ತಕ "ತಿರ್‌ಯಾಖುಲ್ ಖುಲೂಬ್" ಪುಟ ಸಂಖ್ಯೆ 173 ರಿಂದ 191 ರಲ್ಲಿ ಪ್ರಕಟಿಸಿದರು. ಈ ಪಟ್ಟಿಗಳನ್ನು ನೋಡಿದಾಗ, ಅದರಲ್ಲಿ ಹತ್ತಾರು ಮಂದಿ ಹಿಂದುಗಳು ಮಸೀಹರ ಪರವಾಗಿ ನಿಜವಾದ ಸಾಕ್ಷ್ಯವನ್ನು ನೀಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಸಂಖ್ಯೆ 239 ರಲ್ಲಿ, ಲೋಹಾರಿ ದರ್ವಾಜಾ ಮುಲ್ವಾಮಲ್ ಸಾಹಿಬ್ ಹಿಂದೂ ಲಾಹೋರ್ ಅವರ ಸಾಕ್ಷ್ಯವನ್ನು ದಾಖಲಿಸಲಾಗಿದೆ, "ಶ್ರೀ ಮಿರ್ಜಾ ಸಾಹಿಬ್ ಅವರು ಪಂಡಿತ್ ಲೇಖ್‌ರಾಮ್ ಬಗ್ಗೆ ನೀಡಿದ ಭವಿಷ್ಯವಾಣಿಯು ಕಾಲಮಿತಿಯೊಳಗೆ ನೆರವೇರಿತು." ಅದೇ ರೀತಿ, ಸಂಖ್ಯೆ 248 ರಲ್ಲಿ, ಬೀರ್ಬಲ್ ಸಾಹಿಬ್ ಬದುಮ್ಲಿ ಕ್ವಾಮ್ ಅರೋರಾ ಶಾಹುಕರ್ ಅವರು "ಮಿರ್ಜಾ ಸಾಹಿಬ್ ಅವರ ಈ ಭವಿಷ್ಯ ನಿಜವಾಗಿದೆ". ಅದೇ ರೀತಿ 279ನಲ್ಲಿ ಜೀವನ್ ಸಿಂಗ್ ಬಾಥಾನ್ವಲರವರು ಹೀಗೆ ಸಾಕ್ಷಿ ನೀಡಿದ್ದಾರೆ "ನಾವು ದೃಢೀಕರಿಸುವುದೇನೆಂದರೆ ಮಿರ್ಜಾ ಸಾಹೇಬರು ಸತ್ಯವಾಗಿದ್ದಾರೆ ಮತ್ತು ಲೇಖ್ ರಾಮ್ ಸತ್ತಿದ್ದಾನೆ." ದುರದೃಷ್ಟವಶಾತ್, ಹಿಂದೂಗಳು ಭವಿಷ್ಯವಾಣಿಯ ಸತ್ಯವನ್ನು ನೋಡಿದರು. ಆದರೆ ಮುಹಮ್ಮದ್ ಹುಸೇನ್ ಬಟಾಲ್ವಿ ಅದನ್ನು ನೋಡಲಿಲ್ಲ.

### ಮುಹಮ್ಮದ್ ಹುಸೇನ್ ಅವರ ಭವಿಷ್ಯವನ್ನು ಹೇಗಾದರೂ ಅಮಾನ್ಯಗೊಳಿಸುವ ಪ್ರಯತ್ನ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈಗ ಈ ಇಸ್ತಿಫ್ತಾ ಅಗತ್ಯವಿರುವ ಕಷ್ಟವೆಂದರೆ ಆರ್ಯ ಸಾಹಿಬರು ಈ ಕತೃವನ್ನು ರಹಸ್ಯ ಪಿತೂರಿ ಎಂದು ಆರೋಪಿಸಿದರು. ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ಸಮುದಾಯದ ಕೆಲವು ಹಿರಿಯರು ಸಹ ಅವರ ಮಾತನ್ನು ಒಪ್ಪಿದರು ಮತ್ತು ಅಂತಹ ಭವ್ಯವಾದ ಭವಿಷ್ಯವಾಣಿಯ ನಿರಾಕರಣೆಯು ಒಪ್ಪಂದದ ಪತ್ರಗಳ ಪ್ರಕಾರ ಇಸ್ಲಾಂನ ನಿರಾಕರಣೆಗೆ ಕಾರಣವಾಯಿತು, ಅದನ್ನು ಹೇಗಾದರೂ ಅಮಾನ್ಯಗೊಳಿಸಬೇಕೆಂದು ಒತ್ತಾಯಿಸಿದರು. ಆದ್ದರಿಂದ, ಮೌಲ್ವಿ ಅಬು ಸಈದ್ ಮುಹಮ್ಮದ್ ಹುಸೇನ್ ಸಾಹಿಬ್ ಬರೆಲ್ವಿ, ಸಂಪಾದಕ ಇಶಾತ್–ಉಲ್–ಸುನ್ನಾ ಮತ್ತು ಇತರ ಕೆಲವು ಮೌಲ್ವಿಗಳು ಸಾಮಾನ್ಯವಾಗಿ ಈ ಭವಿಷ್ಯವಾಣಿ ಸುಳ್ಳಾಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಅವರು ನನಗೆ ಒಂದು ಪತ್ರವನ್ನು ಕಳುಹಿಸಿದರು, ಅದರಲ್ಲಿ ಅವರು ಬರೆದಿದ್ದಾರೆ: "ಭವಿಷ್ಯವಾಣಿಯು ಈಡೇರಲಿಲ್ಲ ಎಂದು ನಾನು ಪ್ರಾಮಾಣಿಕವಾಗಿ ನಿರ್ಧರಿಸಿದ್ದೇನೆ, ಅಂದರೆ, ಲೇಖ್ ರಾಮ್‌ನ ಸಾವು ಸಾಂದರ್ಭಿಕವಾಗಿತ್ತು ಅದರಲ್ಲಿ ಅಲ್ಲಾಹನ ಯಾವ ಕೈವಾಡವಿರಲಿಲ್ಲ." "ಅವರು ಹೇಳಿದರು, ಅಂತಹ ಕಟ್ಟು ಕಥೆಗಳ ಬಗ್ಗೆ ಪ್ರತಿಕ್ರಿಯಿಸುವುದು ಅಗತ್ಯವೆಂದು ಅವರು ಪರಿಗಣಿಸಲಿಲ್ಲ. ಮತ್ತು ಇದು ಭವಿಷ್ಯವಾಣಿಯ ಸಮಯದಲ್ಲಿ ಸಂಭವಿಸಿದ ಆಕಸ್ಮಿಕ ಸಾವು ಎಂದು ಏಕೆ ಒಪ್ಪಿಕೊಳ್ಳಬಾರದು? (ಅಲ್–ಇಸ್ತಿಫ್ತಾ, ರೂಹಾನಿ ಖಝಾಇನ್, ಸಂಫುಟ–12, ಪುಟ–111)

### ಅಂತಹ ವ್ಯಾಖ್ಯಾನಗಳೊಂದಿಗೆ, ಪ್ರಪಂಚದ ಯಾವುದೇ ಪ್ರವಾದಿಯ ಭವಿಷ್ಯವಾಣಿಯು ಸ್ಥಾಪಿಸಲ್ಪಡುವುದಿಲ್ಲ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಆಯಿಶ ಹೇಳುತ್ತಾರೆ: ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಜಿನ್ನ್ ಮತ್ತು ಇನ್ಸ್‌ನ ಶೈತಾನರು ಉಮರ್‌ರಿಗೆ ಹೆದರಿ ಹೋಗುತ್ತಿರುವುದಾಗಿ ನಾನು ನೋಡಿದ್ದೇನೆ. ಅನಂತರ ನಾವು ಅಲ್ಲಿಂದ ಮರಳಿಬಂದೆವು.

ನಾನು ಇಷ್ಟಪಡುವ ಜಾಗದಲ್ಲಿ ಉಮರ್ ಬಿನ್ ಖತ್ತಾಬ್ ಇರುತ್ತಾರೆ. ಉಮರ್ ಬಿನ್ ಖತ್ತಾಬ್ ಇಷ್ಟಪಡುವ ಜಾಗದಲ್ಲಿ ನಾನು ಇರುತ್ತೇನೆ. ನನ್ನ ನಂತರ ಉಮರ್ ಬಿನ್ ಖತ್ತಾಬ್ ಇರುವ ಜಾಗದಲ್ಲಿ ಸತ್ಯವಿರುವುದು.

ಹಝ್ರತ್ ಉಮರರ(ರ) ನಾಲಗೆ ಮತ್ತು ಹೃದಯದಲ್ಲಿ ಸಮಾಧಾನದ ಸ್ಥಿತಿ ಜಾರಿಯಾಗುತ್ತಿತ್ತು.

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅಬೂಬಕ್ರ್ ಮತ್ತು ಉಮರ್ ಆರಂಭ ಮತ್ತು ಕೊನೆಯ ಎಲ್ಲ ಹಿರಿಯರ ಸರದಾರರಾಗಿರುವರು. ಪ್ರವಾದಿಗಳನ್ನು ಹೊರತುಪಡಿಸಿ ಇತರ ಎಲ್ಲರ ನೇತಾರರಾಗಿರುವರು.

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಐದು ದಿವಂಗತರಾದ ಸನ್ಮಾನ್ಯ ನಸೀರ್ ಅಹ್ಮದ್ ಸಾಹಿಬ್‌ರ ಮಗನಾದ ಸನ್ಮಾನ್ಯ ಕಾಮ್‌ರಾನ್ ಅಹ್ಮದ್ ಸಾಹಿಬ್ ಶಹೀದ್, ಡಾಕ್ಟರ್ ಮಿರ್ಝಾ ನಬೀರ್ ಅಹ್ಮದ್ ಮತ್ತು ಅವರ ಪತ್ನಿಯಾದ ಆಯಿಶ ಅಂಬರ್ ಸಯ್ಯದ್, ಕರಾಚಿಯ ಕ್ಲಿಫ್ಟನ್ ಜಮಾಅತಿನಲ್ಲಿ ಸೆಕ್ರಟರಿ ಮಾಲ್ ಆಗಿದ್ದ ಚೌಧರಿ ನಸೀರ್ ಅಹ್ಮದ್ ಸಾಹಿಬ್ ಮತ್ತು ಪಶ್ಚಿಮ ರಬ್ವದ ದಾರುರ್ರಹ್ಮತ್ತಿನ ಚೌಧರಿ ನಬಿ ಬಖ್ಷ್ ಸಾಹಿಬ್‌ರ ಪತ್ನಿಯಾದ ಸರ್‌ದಾರಾನ್ ಬೀಬಿ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **12–11–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ ۔ بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಇಂದು ಅದನ್ನೇ ಮುಂದುವರಿಸುತ್ತೇನೆ. ಲೋಕದೊಂದಿಗೆ ಹಝ್ರತ್ ಉಮರ್‌ರಿಗೆ ಇದ್ದ ವಿರಕ್ತಿ ಅಥವಾ ಅವರಿಗೆ ಭೌತಿಕತೆಯೊಂದಿಗೆ ಆಸಕ್ತಿ ಇಲ್ಲದಿರುವುದರ ಬಗ್ಗೆ ಹಝ್ರತ್ ಹಫ್ಸ ಬಿನ್ತ್ ಉಮರ್ ವರದಿ ಮಾಡುತ್ತಾರೆ: ನಾನು ನನ್ನ ತಂದೆಯನ್ನು ಸಂಬೋಧನೆ ಮಾಡುತ್ತಾ ಹೀಗೆ ಹೇಳಿದ್ದೆ: ಹೇ ನನ್ನ ಪಿತಾ, ಅಲ್ಲಾಹನು ರಿಝ್ಕನ್ನು ಎಂದರೆ ಜೀವನಾಧಾರವನ್ನು ಬಹಳಷ್ಟು ನೀಡಿರುವನು ಮತ್ತು ನಿಮಗೆ ವಿಜಯಗಳನ್ನು ದಯಪಾಲಿಸಿದ್ದಾನೆ ಹಾಗೂ ಸಾಕಷ್ಟು ಸಂಪತ್ತನ್ನು ನೀಡಿರುವನು, ಹೀಗಿರುವಾಗ ನೀವೇಕೆ ಸ್ವಲ್ಪ ಮೃದುವಾದ ಆಹಾರವನ್ನು ತಿನ್ನುವುದಿಲ್ಲ? ಹೆಚ್ಚು ನುಣುಪಾದ ವಸ್ತ್ರಗಳನ್ನು ಧರಿಸುವುದಿಲ್ಲವೇಕೆ? ಹಝ್ರತ್ ಉಮರ್(ರ) ಹೇಳಿದರು: ನಾನು ನಿನ್ನಿಂದಲೇ ಇದರ ಬಗ್ಗೆ ತೀರ್ಮಾನವನ್ನು ಕೇಳುತ್ತೇನೆ. ಹಝ್ರತ್ ಪೈಗಂಬರ್‌ರಿಗೆ(ಸ) ತನ್ನ ಜೀವಿತದಲ್ಲಿ ಎಷ್ಟು ಕಷ್ಟತೆಗಳಿಂದ ಸಾಗಬೇಕಾಗಿ ಬಂದಿತ್ತು ಎಂದು ನಿನಗೆ ನೆನಪಿಲ್ಲವೇ? ಇದನ್ನು ಎಷ್ಟು ಬಾರಿ ಅವರು ನನಗೆ ನೆನಪಿಸಿ ಕೊಟ್ಟರು ಎಂದರೆ, ಕೊನೆಗೆ ಹಝ್ರತ್ ಹಫ್ಸ ಅತ್ತುಬಿಟ್ಟರು. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಾನು ಹಝ್ರತ್ ಪೈಗಂಬರರ(ಸ) ಮತ್ತು ಹಝ್ರತ್ ಅಬೂಬಕರರ(ರ) ಜೀವಿತಗಳ ಕಠಿಣತೆಯಲ್ಲಿ ಭಾಗೀದಾರನಾಗುವೆನು. ಹೀಗಾದರೆ, ಅವರಿಬ್ಬರ ಪರಲೋಕದ ಆರಾಮದಾಯಕ ಜೀವಿತದಲ್ಲಿ ಬಹುಶಃ ನಾನು ಅವರ ಜೊತೆಗೆ ಇರಬಹುದು.

ಹಝ್ರತ್ ಉಮರ್(ರ) ಹಝ್ರತ್ ಹಫ್ಸರೊಡನೆ ಹೀಗೆ ಹೇಳಿದ್ದಾಗಿಯೂ ವರದಿಯಿದೆ: ಹೇ ಹಫ್ಸಾ, ನೀನು ನಿನ್ನ ಸಮುದಾಯಕ್ಕೆ ಒಳ್ಳೆಯುದನ್ನು ಬಯಸಿದ್ದೀಯಾ. ಆದರೆ ನಿನ್ನ ತಂದೆಗೆ ಒಳ್ಳೆಯದು ಮಾಡಲಿಲ್ಲ. ನಾನು ಹೀಗೆಲ್ಲ ಮಾಡಿದರೆ, ಸಮುದಾಯಕ್ಕೆ ಉತ್ತಮವಾಗಿ ಸೇವೆ ಸಲ್ಲಿಸಲು ಸಾಧ್ಯವಾಗಬಹುದು ಎಂದು ನೀನು ನನಗೆ ಸಲಹೆ ಕೊಟ್ಟಿದ್ದೀಯ. ಆದರೆ ನನಗೆ ಅದು ಒಳ್ಳೆಯದಲ್ಲ. ನನ್ನ ಕುಟುಂಬಕ್ಕೆ ಕೇವಲ ನನ್ನ ಜೀವ ಮತ್ತು ನನ್ನ ಸಂಪತ್ತಿನ ಮೇಲೆ ಅವಕಾಶವಿದೆ. ಆದರೆ ನನ್ನ ದೀನ್ ಮತ್ತು ನನಗೆ ಒಪ್ಪಿಸಲಾದ ಸಂಪತ್ತಿನ ಮೇಲೆ ಹಕ್ಕಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–148, ದಾರುಲ್ ಕುತುಬ್. ಇಲ್‌ಮಿಯ ಬೈರೂತ್ 1996)

ನನಗೆ ವಹಿಸಲಾದ ಅಧಿಕಾರ ಮತ್ತು ಅಮಾನತ್ತಿನ ಬಗ್ಗೆ ನೀನು ಏನನ್ನು ಹೇಳುವ ಆವಶ್ಯಕತೆಯಿಲ್ಲ. ಈ ಕುರಿತು ಹೇಳುವ ಅಧಿಕಾರ ನಿನಗಿಲ್ಲ.

ಹಝ್ರತ್ ಇಕ್ರಿಮ ಬಿನ್ ಖಾಲಿದ್ ವರದಿ ಮಾಡುತ್ತಾರೆ: ಹಝ್ರತ್ ಹಫ್ಸ, ಹಝ್ರತ್ ಅಬ್ದುಲ್ಲಾಹ್ ಮತ್ತು ಬೇರೆ ಕೆಲವು ಜನರು ಹಝ್ರತ್ ಉಮರ್‌ರೊಡನೆ ಮಾತುಕತೆ ನಡೆಸುತ್ತಾ ಹೇಳಿದರು: ನೀವು ಉತ್ತಮ ಆಹಾರವನ್ನು ತಿನ್ನುವುದಾದರೆ ಸತ್ಯಕ್ಕಾಗಿ ಕೆಲಸ ಮಾಡಲು ನಿಮಗೆ ಹೆಚ್ಚು ಶಕ್ತಿ ಲಭಿಸುವುದು. ಹಝ್ರತ್ ಉಮರ್(ರ) ಕೇಳಿದರು: ನಿಮ್ಮೆಲ್ಲರ ಸಲಹೆ ಇದೇ ಆಗಿದೆಯೇ? ಹೌದೆಂದು ಅವರೆಲ್ಲರೂ ಹೇಳಿದರು. ಹಝ್ರತ್ ಉಮರ್(ರ) ಹೇಳಿದರು: ನಿಮ್ಮ ಉತ್ತಮ ಉದ್ದೇಶ ನನಗೆ ಮನವರಿಕೆಯಾಯಿತು. ಆದರೆ ನಾನು ನನ್ನ ಇಬ್ಬರು ಸ್ನೇಹಿತರಾದ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್‌ರನ್ನು ಯಾವ ಮಾರ್ಗದಲ್ಲಿ ಕಂಡು ಬಂದಿರುವೆನೋ ಆ ಮಾರ್ಗವನ್ನು ಬಿಟ್ಟು ಬಿಡುವುದಾದರೆ, ನಾನು ಅವರಿಬ್ಬರನ್ನು ಕೊನೆಗೆ ಭೇಟಿಯಾಗಲು ಸಾಧ್ಯವಿಲ್ಲ. ಅವರೊಂದಿಗೆ ಗಮ್ಯಸ್ಥಳಕ್ಕೆ ತಲುಪಲು ಸಾಧ್ಯವಿಲ್ಲ. (ತಾರೀಖುಲ್ ಖುಲಫಾ, ಜಲಾಲುದ್ದೀನ್ ಸುಯೂತಿ, ಪುಟ–101, ದಾರುಲ್ ಕುತುಬ್ ಅಲ್‌ಅರಬಿಯ ಬೈರೂತ್ ಲೆಬನಾನ್ 1999)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ಕಾಲಘಟ್ಟವು ಭಯ ಮತ್ತು ಅಪಾಯದದ್ದಾಗಿತ್ತು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಮುಸ್ಲಿಮರಿಗೆ ನೀಡಿದ ಆದೇಶದಿಂದ ನಾವು ಸಹ ಪಾಠ ಕಲಿಯಬಹುದು. ಅವರು ಸ್ವಂತ ರೀತಿಯು ಇದಾಗಿತ್ತು ಮತ್ತು ಅದನ್ನೇ ಅವರು ಉಪದೇಶಿಸಿದ್ದರು. ಅದೇನೆಂದರೆ, ಒಂದಕ್ಕಿಂತ ಹೆಚ್ಚು ಸಾರನ್ನು ಉಪಯೋಗಿಸಬಾರದು ಎಂದು ನಿರ್ದೇಶನ ನೀಡಿದ್ದರು. ಇದನ್ನು ತಹ್ರೀಕ್ ಜದೀದ್ ಸಂಬಂಧವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರಸ್ತಾಪಿಸಿದ್ದರು. ಹೇಗಿದ್ದರೂ ಇದಕ್ಕೆ ಎಷ್ಟು ಒತ್ತು ಕೊಡಲಾಗುತ್ತಿತ್ತು ಎಂದರೆ, ಕೆಲವು ಸಹಾಬರು ಈ ವಿಷಯದಲ್ಲಿ ಹದ್ದುಮೀರಿದ್ದರು. ಒಂದು ಬಾರಿ ಹಝ್ರತ್ ಉಮರರ ಮುಂದೆ ವಿನೆಗರ್ ಮತ್ತು ಉಪ್ಪನ್ನು ಇರಿಸಲಾಯಿತು. ಎರಡು ಸಾರುಗಳನ್ನು ಏಕೆ ಇರಿಸಲಾಗಿವೆ, ಕೇವಲ ಒಂದು ಸಾರನ್ನು ಉಪಯೋಗಿಸಲು ಹಝ್ರತ್ ಪೈಗಂಬರ್(ಸ) ಆಜ್ಞಾಸಿರುವರು ಎಂದು ಅವರು ಹೇಳಿದರು.ಇವು ಎರಡಲ್ಲ, ಬದಲಾಗಿ ಎರಡೂ ಸೇರಿಸಿ ಒಂದು ಸಾರು ಆಗುವುದು ಎಂದು ಅವರೊಡನೆ ಹೇಳಲಾಯಿತು. ಆದರೆ ಇವು ಎರಡು ಎಂದು ಅವರು ಹೇಳಿದರು. ಹಝ್ರತ್ ಉಮರರ(ರ) ಈ ಕೃತ್ಯ

ಹಝ್ರತ್ ಪೈಗಂಬರ್‌ರೊಡನೆ(ಸ) ಇದ್ದ ಪ್ರೇಮದ ಕಾರಣದಿಂದ ಮಿತಿಯನ್ನು ಮೀರಿತ್ತು ಎಂದು ತೋರುತ್ತದೆ. ಬಹುಶಃ ಹಝ್ರತ್ ಪೈಗಂಬರರ(ಸ) ಉದ್ದೇಶ ಇದಾಗಿರಲಿಲ್ಲ. ಆದರೆ ಮುಸ್ಲಿಮರಲ್ಲಿ ಸರಳತನದ ಆವಶ್ಯಕತೆಯಿದೆ ಎಂದು ಅರಿತಿದ್ದ ಹಝ್ರತ್ ಪೈಗಂಬರ್(ಸ) ಅದಕ್ಕೆ ಬಹಳ ಒತ್ತು ನೀಡಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಹಝ್ರತ್ ಉಮರಂತಹ ಬೇಡಿಕೆಯನ್ನು ಇರಿಸುವುದಿಲ್ಲ. ಉಪ್ಪು ಮತ್ತು ವಿನೆಗರ್ ಬೇರೆ ಬೇರೆ ಸಾರುಗಳು ಎಂದು ಹೇಳುವುದಿಲ್ಲ. ಆದರೆ ಇಂದಿನಿಂದ ಮೂರು ವರ್ಷಗಳಿಗೆ, ಪ್ರತಿಯೊಬ್ಬ ಅಹ್ಮದಿಯು ಈ ಧರ್ಮಯುದ್ಧದಲ್ಲಿ ನಮ್ಮ ಜೊತೆಗೆ ಭಾಗಿಯಾಗಬೇಕು. ಈ ಬಗ್ಗೆ ಪ್ರತಿ ವರ್ಷ ನಾನು ಪುನಃ ಘೋಷಿಸುವೆನು. ಏಕೆಂದರೆ, ಈ ಮೂರು ವರ್ಷಗಳಲ್ಲಿ ಸ್ಥಿತಿಗತಿಗಳು ಬದಲಾದರೆ ಆದೇಶವು ಬದಲಾಗುವುದು. ಅದೇನೆಂದರೆ ಅವರು ಇಂದಿನಿಂದ ಕೇವಲ ಒಂದು ಸಾರನ್ನು ಉಪಯೋಗಿಸಬೇಕು. ರೊಟ್ಟಿ ಮತ್ತು ಸಾರು ಅಥವಾ ಅಕ್ಕಿಯ ಅನ್ನ ಮತ್ತು ಸಾರು. ಇದನ್ನು ಎರಡು ಎಂದು ನಾನು ಹೇಳುವುದಿಲ್ಲ. ಬದಲಾಗಿ ಎರಡೂ ಸೇರಿ ಒಂದಾಗುವುದು. ಆದರೆ ರೋಟಿಯೊಂದಿಗೆ ಎರಡು ಸಾರುಗಳು ಇರಬಾರದು ಅಥವಾ ಅಕ್ಕಿಯ ಅನ್ನದೊಂದಿಗೆ ಎರಡು ಸಾರುಗಳು ಮಾಡುವ ಅನುಮತಿಯಿಲ್ಲ. (ಖುತ್ಬಾತೆ ಮಹ್ಮೂದ್, ಸಂಪುಟ–15, ಪುಟ–426)

ಇದು ತಹ್ರೀಕ್ ಜದೀದಿನ ಘೋಷಣೆ ಮಾಡಲಾದ ಕಾಲಘಟ್ಟದ ಮಾತಾಗಿದೆ. ಆಗ ಜಮಾಅತಿಗೆ ಹೀಗೆ ಮಾಡುವ ಆವಶ್ಯಕತೆಯಿತ್ತು. ತಮ್ಮ ಖರ್ಚನ್ನು ಕಡಿಮೆಗೊಳಿಸಿ ಚಂದಾವನ್ನು ನೀಡಲು ಮನವಿ ಮಾಡಲಾಗಿತ್ತು. ಅಲ್ಲಾಹನ ಅನುಗ್ರಹದಿಂದ ಈಗ ಸ್ಥಿತಿಗತಿಗಳು ಬದಲಾಗಿವೆ. ಆದ್ದರಿಂದ ಇದನ್ನು ಈಗ ಪಾಲಿಸಬೇಕಾಗಿಲ್ಲ. ಆದರೂ ದುಂದುವೆಚ್ಚ ಮಾಡಬಾರದು.

**ವಲ್ಲದೀನ ಇದಾ಼ ಅನ್‌ಫಿಖೂ ಲಮ್ ಯುಸ್‌ರಿಫೂ ವಲಮ್ ಯಖ್‌ತರು ವಕಾನ ಬೈನ ದಾ಼ಲಿಕ ಖವಾಮ** ಎಂಬ ವಚನವನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯಾರಾದರೂ ಅಲ್ಲಾಹನ ದಾಸನಾಗಲು ಬಯಸುವನಾದರೆ ಅದಕ್ಕಾಗಿ ತನ್ನ ಸಂಪತ್ತನ್ನು ಖರ್ಚುಮಾಡುವಾಗ ಎರಡು ಸಂಗತಿಗಳನ್ನು ದೃಷ್ಟಿಯಲ್ಲಿರಿಸಬೇಕು ಎಂದು ಅಲ್ಲಾಹನು ಹೇಳಿದ್ದಾನೆ. ಅದರಲ್ಲಿ ಒಂದನೆಯದ್ದು ಏನೆಂದರೆ, ಅವರು ತಮ್ಮ ಸಂಪತ್ತನ್ನು ಅನಾವಶ್ಯಕವಾಗಿ ಖರ್ಚು ಮಾಡಬಾರದು. ಅವರ ಆಹಾರ ತೋರಿಕೆಗಾಗಿ ಮತ್ತು ರುಚಿಗಾಗಿ ಮಾತ್ರವಾಗಿರಬಾರದು. ಬದಲಾಗಿ ಶಕ್ತಿ ಮತ್ತು ದೈಹಿಕಬಲವನ್ನು ನೆಲೆನಿಲ್ಲಿಸಲಿಕ್ಕೆ ಆಗಿರಬೇಕು. ಅವರ ಬಟ್ಟೆಗಳನ್ನು ಸೌಂದರ್ಯಕ್ಕಾಗಿ ಮಾತ್ರ ತೊಡುವುದಿಲ್ಲ, ಬದಲಾಗಿ ದೇಹವನ್ನು ಮರೆಸಲು ಮತ್ತು ಅಲ್ಲಾಹನು ಅವನಿಗೆ ನೀಡಿರುವ ಗೌರವವನ್ನು ಸಂರಕ್ಷಿಸಲಿಕ್ಕಾಗಿ ಅವರು ವಸ್ತ್ರಧಾರಣೆ ಮಾಡುತ್ತಾರೆ. ಸಹಾಬರು ಹೀಗೆಯೇ ಮಾಡುತ್ತಿದ್ದರು ಎಂದು ಸಹಾಬರ ರೀತಿಯಿಂದ ತಿಳಿದುಬರುತ್ತದೆ. ಹಝ್ರತ್ ಉಮರ್(ರ) ಒಂದು ಬಾರಿ ಸಿರಿಯ ದೇಶಕ್ಕೆ ಹೋದರು. ಅಲ್ಲಿ ಕೆಲವು ಸಹಾಬರು ರೇಶ್ಮೆಯ ಬಟ್ಟೆಯನ್ನು ತೊಟ್ಟುಕೊಂಡಿದ್ದರು. ರೇಶ್ಮೆಯ ಬಟ್ಟೆಯಿಂದ ಇಲ್ಲಿ ಅಲ್ಪ ಮಟ್ಟಿಗೆ ರೇಶ್ಮೆ ಇರುವ ಬಟ್ಟೆಗಳನ್ನು ಉದ್ದೇಶಿಸಲಾಗಿದೆ. ಶುದ್ಧವಾದ ರೇಶ್ಮೆ ಬಟ್ಟೆಯನ್ನು ಧರಿಸುವುದು, ಕೆಲವು ಚರ್ಮರೋಗಗಳಿಗೆ ಹೊರತುಪಡಿಸಿ, ಪುರುಷರಿಗೆ ನಿಷಿದ್ಧವಾಗಿದೆ. ಹಝ್ರತ್ ಉಮರ್(ರ) ಅದನ್ನು ಇಷ್ಟಪಡಲಿಲ್ಲ. ಅವರು ಹೇಳಿದರು: ನೀವೀಗ ಆರಾಮದಾಯಕ ಜೀವಿತವನ್ನು ಇಷ್ಟಪಡುತ್ತಿದ್ದೀರಿ. ರೇಶ್ಮೆ ಬಟ್ಟೆಯನ್ನು ನೀವೀಗ ಧರಿಸಲು ಶುರುಮಾಡಿದ್ದೀರಿ. ಆಗ ಅವರಲ್ಲಿ ಒಬ್ಬ ಸಹಾಬಿ ತನ್ನ ನಿಲುವಂಗಿಯನ್ನು ಎತ್ತಿ ತೋರಿಸಿದರು. ಅವರು ರೇಶ್ಮೆಯ ನಿಲುವಂಗಿಯ ಅಡಿಯಲ್ಲಿ ದಪ್ಪದ ಒರಟಾದ ನಿಲುವಂಗಿಯನ್ನು ಧರಿಸಿದ್ದರು. ಆ ಸಹಾಬಿ ಹಝ್ರತ್ ಉಮರ್‌ರೊಡನೆ ಹೇಳಿದರು: ನಾವು ರೇಶ್ಮೆ ಬಟ್ಟೆಯನ್ನು ಇಷ್ಟಪಡುವ ಕಾರಣದಿಂದ ಅದನ್ನು ಧರಿಸಿಲ್ಲ. ಬದಲಾಗಿ, ಈ ದೇಶದ ರೀತಿಯೇ ಇದಾಗಿದೆ. ಇಲ್ಲಿಯ ಜನರಿಗೆ ಅತ್ಯಂತ ವೈಭವದಿಂದ ಇರುವ ನೇತಾರರನ್ನು ನೋಡಿ ಅಭ್ಯಾಸವಾಗಿ ಬಿಟ್ಟಿದೆ. ಆದ್ದರಿಂದ ಅವರನ್ನು ಗಮನದಲ್ಲಿಟ್ಟುಕೊಂಡು ನಾವು ಕೂಡ ನಮ್ಮ ಬಟ್ಟೆಗಳನ್ನು ದೇಶದ ರಾಜಕೀಯ ರೀತಿಯಂತೆ ಬದಲಾಯಿಸಿದ್ದೇವೆ. ಸತ್ಯದಲ್ಲಿ ನಮ್ಮ ಮೇಲೆ ಇದರ ಯಾವ ಪ್ರಭಾವವು ಇಲ್ಲ. ದುಂದುವೆಚ್ಚ ಮತ್ತು ಅನಾವಶ್ಯಕ ಖರ್ಚಿನ ಅರ್ಥವೇನೆಂದು ಸಹಾಬರ ರೀತಿಯಿಂದ ಗೊತ್ತಾಗುತ್ತದೆ. ಆವಶ್ಯವಿಲ್ಲದ ಸಂಗತಿಗಳಿಗಾಗಿ ಹಣವನ್ನು ಖರ್ಚು ಮಾಡಬಾರದು ಎಂದಾಗಿದೆ ಇದರ ಅರ್ಥ. ಕೇವಲ ಸೌಂದರ್ಯಕ್ಕಾಗಿ ಖರ್ಚು ಮಾಡಬಾರದು. ತನ್ನ ಸಂಪತ್ತಿನಿಂದ ದುಂದುವೆಚ್ಚ ಮಾಡದವರು ಅಲ್ಲಾಹನ ದಾಸನಾಗಿದ್ದಾನೆ ಎಂದು ಅಲ್ಲಾಹನು ಹೇಳುತ್ತಾನೆ.

ಅವರು ತಮ್ಮ ಸಂಪತ್ತನ್ನು ತೋರಿಕೆಗಾಗಿ ಖರ್ಚು ಮಾಡುವುದಿಲ್ಲ. ಬದಲಾಗಿ ಪ್ರಯೋಜನ ಮತ್ತು ಉಪಯೋಗಕ್ಕಾಗಿ ಖರ್ಚು ಮಾಡುತ್ತಾರೆ. ಅವರು ನೀಡಬೇಕಾದ ಮತ್ತು ಆವಶ್ಯವಾದ ಸಂಗತಿಗಳಿಗಾಗಿ ಖರ್ಚು ಮಾಡದೆಯೂ ಇರುವುದಿಲ್ಲ. ಮಧ್ಯಮಾರ್ಗವನ್ನು ಅವಲಂಬಿಸಿ ಪ್ರಯೋಜನಕ್ಕೆ ಕಾರಣವಾಗುತ್ತಾರೆ. ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿ ಹಣವನ್ನು ವ್ಯರ್ಥಮಾಡುವುದೂ ಇಲ್ಲ ಮತ್ತು ಅನುಮತನೀಯವಾದ ಹಕ್ಕನ್ನು ಕೂಡ ಈಡೇರಿಸದೆ ಅದನ್ನು ತಡೆದು ನಿಲ್ಲಿಸುವುದೂ ಇಲ್ಲ. ಹಣ ಖರ್ಚು ಮಾಡುವುದಕ್ಕೆ ಸಂಬಂಧಿಸಿ ಅಲ್ಲಾಹನ ದಾಸನಿಗೆ ಈ ಎರಡು ನಿಬಂಧನೆಗಳು ಇವೆ. ಆದರೆ ಜನರಲ್ಲಿ ಅನೇಕರು ಒಂದೋ ದುಂದುವೆಚ್ಚ ಮಾಡುವವರಾಗಿರುತ್ತಾರೆ ಅಥವಾ ಜಿಪುಣತನ ತೋರಿಸುವವರಾಗಿರುತ್ತಾರೆ. (ಖುತ್ಬಾತೆ ಮಹ್ಮೂದ್, ಸಂಪುಟ–5, ಪುಟ–3,4)

ಹಝ್ರತ್ ಉಮರ್(ರ) ತೋರಿಕೆ ಮತ್ತು ವೈಭವ ಮತ್ತು ದರ್ಪದ ವಸ್ತ್ರಗಳನ್ನು ಧರಿಸುವುದನ್ನು ವಿರೋಧಿಸುತ್ತಿದ್ದರು. ಇರಾನಿನ ಸೇನಾಧಿಪತಿಯಾದ ಹುರ್‌ಮುಝಾನಿನ ಘಟನೆಯಲ್ಲಿ ಇದರ ವಿವರಣೆ ಲಭಿಸುತ್ತದೆ. ಇದನ್ನು ವಿಶದವಾಗಿ ನಾನು ಮೊದಲು ವಿವರಿಸಿದ್ದೇನೆ. ವಿಷಯವನ್ನು ಸ್ಪಷ್ಟಪಡಿಸಲಿಕ್ಕಾಗಿ ಅದರ ಸ್ವಲ್ಪ ಭಾಗವನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

ತಿಸ್ತರ್ ಮೇಲೆ ವಿಜಯ ಸಾಧಿಸಲಾದಾಗ, ಇರಾನಿನ ಸೇನಾಧಿಪತಿಯಾದ ಹುರ್‌ಮಝಾನ್ ಆಯುಧವನ್ನು ಕೆಳಗೆ ಹಾಕಿದನು ಮತ್ತು ತನ್ನನ್ನು ಸ್ವತಃ ಮುಸ್ಲಿಮರಿಗೆ ಒಪ್ಪಿಸಿದನು. ಅವನನ್ನು ಹಝ್ರತ್ ಉಮರರ(ರ) ಸನ್ನಿಧಿಯಲ್ಲಿ ಹಾಜರಾಗಲು ಮದೀನಕ್ಕೆ ಕಳುಹಿಸಲಾಯಿತು. ಮದೀನಕ್ಕೆ ಪ್ರವೇಶಿಸುವುದಕ್ಕಿಂತ ಮುಂಚಿತವಾಗಿ ಅವನಿಗೆ ಅವನ ರೇಶ್ಮೆಯ ಬಟ್ಟೆಯನ್ನು ತೊಡಿಸಿದರು. ಅವನ ನೈಜ ಪ್ರತಾಪವನ್ನು ಹಝ್ರತ್ ಉಮರ್(ರ) ನೋಡುವಂತಾಗಲು ಹೀಗೆ ಮಾಡಲಾಗಿತ್ತು. ಅವನು ಹಝ್ರತ್ ಉಮರರ(ರ) ಮುಂದೆ ಬಂದಾಗ, ಇವನು ಹುರ್ಮುಝಾನ್ ಆಗಿರುವನೇ ಎಂದು ಕೇಳಿದರು. ಹೌದೆಂದು ಜನರು ಹೇಳಿದರು. ಆಗ ಹಝ್ರತ್ ಉಮರ್(ರ) ಅವನು ಧರಿಸಿದ ಬಟ್ಟೆಯನ್ನು ಶ್ರದ್ಧೆಯಿಂದ ನೋಡಿದ ನಂತರ ಹೇಳಿದರು: ನಾನು ಅಲ್ಲಾಹನೊಡನೆ ನರಕದ ಬೆಂಕಿಯಿಂದ ಅಭಯ ಯಾಚಿಸುತ್ತೇನೆ ಮತ್ತು ಅಲ್ಲಾಹನೊಡನೆ ಸಹಾಯವನ್ನು ಬೇಡುತ್ತೇನೆ. ಇವನು ಹುರ್ಮಜಾನ್ ಆಗಿರುವನು, ಇವನೊಂದಿಗೆ ಮಾತಾಡಿರಿ ಎಂದು ಸಂಘದಲ್ಲಿದ್ದ ಜನರು ಹೇಳಿದರು. ಹಝ್ರತ್ ಉಮರ್(ರ) ಹೇಳಿದರು: ಅವನು ತನ್ನ ಹೊಳಪುಳ್ಳ ವಸ್ತ್ರಗಳನ್ನು ಮತ್ತು ಆಭರಣಗಳನ್ನು ಕಳಚುವ ತನಕ ಖಂಡಿತ ನಾನು ಮಾತನಾಡುವುದಿಲ್ಲ. ಅವುಗಳನ್ನೆಲ್ಲ ಕಳಚಿದ ನಂತರ ಹಝ್ರತ್ ಉಮರ್(ರ) ಅವನೊಡನೆ ಮಾತನಾಡಿದರು. (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಅಸ್ಸಲಾಬಿ, ಪುಟ–424–425, ದಅರುಲ್ ಮಾರಿಫ ಬೈರೂತ್ 2007)

ಹಝ್ರತ್ ಉಮರರ ವಿನಯವಂತಿಕೆ ಮತ್ತು ದೇವಭಕ್ತಿಯ ಮಟ್ಟದ ಅಂದಾಜು ಈ ಸಂಗತಿಯಿಂದ ಆಗುತ್ತದೆ. ಹಝ್ರತ್ ಉರ್ವ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್ ತನ್ನ ಹೆಗಲಲ್ಲಿ ನೀರಿನ ಒಂದು ಚರ್ಮದ ಚೀಲವನ್ನು ಎತ್ತಿರುವುದನ್ನು ನಾನು ಕಂಡಾಗ ನಾನು ಹೇಳಿದೆ: ಹೇ ಅಮೀರುಲ್ ಮೂಮಿನೀನ್, ನೀವು ಹೀಗೆ ಮಾಡುವುದು ಸರಿಯಲ್ಲ. ಆಗ ಹಝ್ರತ್ ಉಮರ್(ರ) ಹೇಳಿದರು: ವಿವಿಧ ಸಮುದಾಯಗಳ ಸಂಘಗಳು ಅನುಸರಣೆ ಮತ್ತು ವಿಧೇಯತೆಯನ್ನು ತೋರಿಸುತ್ತಾ ನನ್ನ ಬಳಿಗೆ ಬಂದಾಗ ನನ್ನ ಮನಸ್ಸಲ್ಲಿ ದೊಡ್ಡತನದ ಭಾವನೆ ಇರುವಂತೆ ಅನುಭವವಾಯಿತು. ಆದ್ದರಿಂದ ನಾನು ಆ ದೊಡ್ಡತನವನ್ನು ಮುರಿಯುವುದು ಅವಶ್ಯವೆಂದು ನನಗೆ ಅನಿಸಿತು. ಆದ್ದರಿಂದ ಅದನ್ನು ಮುರಿಯಲಿಕ್ಕಾಗಿ ನೀರಿನ ತೊಗಲ ಚೀಲವನ್ನು ಎತ್ತಿ ಹೋಗಲು ಯೋಚಿಸಿದೆ. (ಸೀರತ್ ಉಮರ್ ಬಿನ್ ಖತ್ತಾಬ್, ಅಸ್ಸಲಾಬಿ, ಪುಟ–122, ದಾರುಲ್ ಮಾರಿಫ ಬೈರೂತ್ 2007)

ಹಝ್ರತ್ ಯಹ್ಯಾ ಬಿನ್ ಅಬ್ದುರ್ರಹ್ಮಾನ್ ಬಿನ್ ಹಾತಿಬ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ; ನಾವೆಲ್ಲರೂ ಹಝ್ರತ್ ಉಮರ್‌ರೊಂದಿಗೆ(ರ) ಮಕ್ಕದಿಂದ ಸಂಘವಾಗಿ ಮರಳಿ ಬರುತ್ತಿದ್ದೆವು. ನಾವು ಝುಜ್‌ನಾನಿನ ಕಣಿವೆಗಳಿಗೆ ತಲುಪಿದಾಗ ಅಲ್ಲಿ ನಿಂತೆವು. ಝುಜ್‌ನಾನ್ ಎಂಬುದು ಮಕ್ಕದಿಂದ 25 ಮೈಲು ದೂರದಲ್ಲಿರುವ ಒಂದು ಪ್ರದೇಶದ ಹೆಸರಾಗಿದೆ. ಆಗ ಹಝ್ರತ್ ಉಮರ್(ರ) ಹೇಳಿದರು: ನಾನು ಈ ಸ್ಥಳದಲ್ಲಿ ನನ್ನ ತಂದೆಯಾದ ಖತ್ತಾಬ್‌ರ ಒಂಟೆಯ ಮೇಲೆ ಇರುತ್ತಿದ್ದ ಕಾಲದ ನೆನಪು ಬರುತ್ತಿದೆ. ನನ್ನ ತಂದೆ ಬಹಳ ಕಠಿಣ ಸ್ವಭಾವದ ವ್ಯಕ್ತಿಯಾಗಿದ್ದರು. ಅವರು ಒಂಟೆಗಳ ಮೇಲೆ ಒಂದು ಬಾರಿ ಮರದ ತುಂಡುಗಳನ್ನು ಕೊಂಡುಹೋಗುತ್ತಿದ್ದರು. ಮತ್ತೊಂದು ಬಾರಿ ಹುಲ್ಲುಗಳನ್ನು ಕೊಂಡುಹೋಗುತ್ತಿದ್ದರು. ಇಂದು ನನ್ನ ಸ್ಥಿತಿ ಏನೆಂದರೆ, ಜನರು ನನ್ನ ವಿಶಾಲವಾದ ಪ್ರದೇಶದಲ್ಲಿ ಯಾತ್ರೆ ಮಾಡಿ ನನ್ನನ್ನು ಭೇಟಿ ಮಾಡಲು

ಬರುತ್ತಾರೆ. ನನ್ನ ಮೇಲೆ ಈಗ ಲೌಕಿಕವಾದ ಯಾವ ಅಧಿಕಾರಿಯೂ ಇಲ್ಲ. ಅನಂತರ ಈ ಪದ್ಯಪಂಕ್ತಿಯನ್ನು ಓದಿದರು:

**ಲಾ ಶೈಅನ್ ಫೀ ಮಾತರಾ ಇಲ್ಲಾ ಬಶಾಶ;**

**ಯಬ್‌ಖಿ ಇಲಾಹುನ್ ವ ಯೂದಿಲ್ ಮಾಲ ವಲ್‌ವಲದ್.**

ಎಂದರೆ, ನೀನು ನೋಡುತ್ತಿರುವುದೆಲ್ಲದಕ್ಕೂ ಯಾವುದೇ ನೆಲೆನಿಲ್ಲುವಿಕೆಯಿಲ್ಲ. ಎಲ್ಲವೂ ತಾತ್ಕಾಲಿಕ ಸಂತೋಷಕ್ಕಾಗಿದೆ. ಕೇವಲ ಅಲ್ಲಾಹನ ಅಸ್ತಿತ್ವ ಬಾಕಿಯುಳಿಯುವುದು. ಸಂಪತ್ತು ಮತ್ತು ಮಕ್ಕಳು ಬಾಕಿಯುಳಿಯದಂತಹದ್ದಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–202, ಉಮರ್ ಬಿನ್ ಅಲ್‌ಖತ್ತಾಬ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಫತಹ್ ಅಲ್‌ಬಾರಿ, ಸಂಪುಟ–2, ಪುಟ–144, ಖದೀಮಿ ಕುತುಬ್ ಖಾನ ಆರಾಮ್‌ಬಾಗ್ ಕರಾಚಿ)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಈ ಕುರಿತು ಹೇಳುತ್ತಾರೆ: ಹಝ್ರತ್ ಉಮರ್(ರ) ಹಜ್ಜ್ ಕರ್ಮಾನುಷ್ಠಾನ ಮಾಡಿ ಮರಳಿ ಬರುವಾಗ ಮರದ ಬಳಿ ನಿಂತುಕೊಂಡರು. ಹುದೈಫ ಧೈರ್ಯಮಾಡಿಕೊಂಡು ಕಾರಣವನ್ನು ಕೇಳಿದರು. ಹಝ್ರತ್ ಉಮರ್(ರ) ಹೇಳಿದರು: ನಾನು ನನ್ನ ಒಂಟೆಯನ್ನು ಮೇಯಿಸುತ್ತಿದ್ದ ಒಂದು ಕಾಲವಿತ್ತು. ಆಗ ಆ ಮರದ ಕೆಳಗೆ ನನ್ನನ್ನು ನನ್ನ ತಂದೆ ಬೈದಿದ್ದರು ಮತ್ತು ಹೊಡೆದಿದ್ದರು. ಆದರೆ ಈಗ ಒಂಟೆಯ ವಿಷಯ ಬಿಡಿ, ಅನೇಕ ಲಕ್ಷ ಜನರು ನನ್ನ ಕಣ್ಣು ಸನ್ನೆಯಿಂದ ಜೀವ ತೊರೆಯಲು ತಯಾರಿರುವರು. ಎಂದರೆ, ನಾನು ಕಣ್ಣಿನಿಂದ ಸೂಚನೆ ನೀಡಿ ಆಜ್ಞಾಪಿಸಿದರೂ ಜೀವತ್ಯಾಗ ಮಾಡಲು ತಯಾರಿರುವ ಜನರಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂಟೆಯನ್ನು ಮೇಯುತ್ತಿದ್ದ ಒಬ್ಬ ವ್ಯಕ್ತಿ ವೈಭವಶಾಲಿಯಾದ ಅರಸನಾದನು ಎಂಬುದು ಆಶ್ಚರ್ಯಕರವಾದ ಸಂಗತಿಯಲ್ಲವೇ? ಕೇವಲ ಲೌಕಿಕ ಅರಸನಲ್ಲ, ಬದಲಾಗಿ ಆಧ್ಯಾತ್ಮಿಕವೂ. ಅಂತಹ ಅರಸ ಉಮರ್ ಆಗಿದ್ದರು. ಅವರು ತನ್ನ ಕಿರಿ ವಯಸ್ಸಿನಲ್ಲಿ ಒಂಟೆಗಳನ್ನು ಮೇಯುತ್ತಿದ್ದರು. ಒಂದು ಬಾರಿ ಅವರು ಹಜ್ಜ್ ವೇಳೆ ಮಾರ್ಗ ಮಧ್ಯೆ ಒಂದು ಸ್ಥಳದಲ್ಲಿ ನಿಂತರು. ಬಿಸಿಲು ಬಹಳ ಕಠಿಣವಾಗಿತ್ತು. ಇದರಿಂದ ಜನರಿಗೆ ಬಹಳ ಕಷ್ಟವಾಗುತ್ತಿತ್ತು. ಆದರೆ ನೀವು ಏಕೆ ಇಲ್ಲಿ ನಿಂತಿದ್ದೀರಿ ಎಂದು ಅವರೊಡನೆ ಯಾರಿಗೂ ಕೇಳುವ ಧೈರ್ಯವಿದ್ದಿರಲಿಲ್ಲ. ಕೊನೆಗೆ ನೀವೇಕೆ ಇಲ್ಲಿ ನಿಂತಿದ್ದೀರಿ ಎಂದು ಹಝ್ರತ್ ಉಮರ್‌ರ ಉತ್ತಮ ಸ್ನೇಹಿತನಾಗಿದ್ದ ಒಬ್ಬ ಸಹಾಬಿ ಹಝ್ರತ್ ಉಮರ್‌ರೊಡನೆ ಕೇಳಿದರು. ಹಝ್ರತ್ ಉಮರ್(ರ) ಹೇಳಿದರು: ಏಕೆಂದರೆ, ಒಂದು ಬಾರಿ ನಾನು ಒಂಟೆಗಳನ್ನು ಮೇಯುತ್ತಾ ಸುಸ್ತಾದಾಗ ಈ ಮರದ ಕೆಳಗೆ ಮಲಗಿದೆ. ಅಷ್ಟರಲ್ಲಿ ನನ್ನ ತಂದೆ ಬಂದು ನನ್ನನ್ನು ಹೊಡೆದರು. ಅಲ್ಲಿ ಹೋಗಿ ನಿದ್ದೆಹೋಗಲಿಕ್ಕಾಗಿ ನಿನ್ನನ್ನು ನಾನು ಕಳುಹಿಸಿರುವೆನೋ? ಎಂದು ಅವರು ಕೇಳಿದರು. ಒಂದು ಸಮಯದಲ್ಲಿ ನನ್ನ ಅವಸ್ಥೆ ಅದಾಗಿತ್ತು. ಆದರೆ ನಾನು ಹಝ್ರತ್ ಪೈಗಂಬರ್‌ರನ್ನು(ಸ) ನಂಬಿದೆನು. ಆಗ ಅಲ್ಲಾಹನು ನನಗೆ ಎಂತಹ ದರ್ಜೆಯನ್ನು ನೀಡಿರುವನು ಎಂದರೆ, ಈಗ ನಾನು ಆದೇಶ ನೀಡಿದರೆ, ಲಕ್ಷಾಂತರ ಜನರು ನನಗಾಗಿ ಜೀವ ನೀಡಲು ತಯಾರಿರುವರು. ಈ ಘಟನೆಯಿಂದ ಮತ್ತು ಇಂತಹ ಅನೇಕ ಘಟನೆಗಳಿಂದ, ಸಹಾಬರು ಎಂತಹ ಸ್ಥಿತಿಯಲ್ಲಿ ಇದ್ದರು ಮತ್ತು ಹಝ್ರತ್ ಪೈಗಂಬರ್‌ರನ್ನು(ರ) ಅನುಸರಿಸಿದ ಕಾರಣದಿಂದ ಅವರ ಸ್ಥಿತಿ ಹೇಗೆ ಬದಲಾಯಿತು ಎಂದು ಗೊತ್ತಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಈ ಘಟನೆಯನ್ನು ಹೇಳಿದ ಕಾರಣವೇನೆಂದರೆ, ನೋಡಿರಿ, ಒಂಟೆ ಮೇಯುವ ಒಬ್ಬ ವ್ಯಕ್ತಿಗೆ, ಯಾರಿಗೂ ಅರಿಯದಂತಹ ಧಾರ್ಮಿಕ ಮತ್ತು ಭೌತಿಕವಾದ ಜ್ಞಾನವನ್ನು ಕಲಿಸಿ ಕೊಡಲಾಯಿತು. ಒಂದು ಕಡೆ ಒಂಟೆ ಮತ್ತು ಆಡುಗಳನ್ನು ಮೇಯುವವರ ಸ್ಥಿತಿಯನ್ನು ನೋಡಿರಿ. ಅವರು ಅರಿವಿನಿಂದ ಎಷ್ಟು ದೂರವಿದ್ದಾರೆ ಎಂದು ನಮಗೆ ಗೊತ್ತಿದೆ. ಮತ್ತೊಂದೆಡೆ ದೇಶವನ್ನು ನಡೆಸಲಿಕ್ಕಿರುವ ಕಾನೂನುಗಳನ್ನು ಚೆನ್ನಾಗಿ ಅರಿತಿರುವ ಯುರೋಪಿನ ವಿದ್ಯಾವಂತರು ಕೂಡ ಹಝ್ರತ್ ಉಮರ್(ರ) ತಯಾರಿಸಿದ ಕಾನೂನನ್ನು ಗೌರವಭಾವದಿಂದ ನೋಡುತ್ತಾರೆ.

ಒಂಟೆಯನ್ನು ಮೇಯುವ ಒಬ್ಬನಿಗೆ ಅಧಿಕಾರದೊಂದಿಗೆ ಏನು ಸಂಬಂಧ? ಆದರೆ ಅವರು ಎಂತಹ ಶ್ರೇಷ್ಠ ಕೆಲಸಗಳನ್ನು ಮಾಡಿದ್ದರು ಎಂದರೆ, ಲೋಕವು ಅವರ ಮುಂದೆ ತಲೆಬಾಗುತ್ತದೆ. ಅವರ ರಾಜಕೀಯ ಜ್ಞಾನವನ್ನು ಹೊಗಳುತ್ತಾರೆ. ಹಝ್ರತ್ ಅಬೂಬಕರ್(ರ) ಕೂಡ ಒಬ್ಬ ಸಾಮಾನ್ಯ ವ್ಯಾಪಾರಿಯಾಗಿದ್ದರು. ಆದರೆ ಅವರಿಗೆ ಇಂತಹ ವಿವೇಕ, ಬುದ್ಧಿ ಮತ್ತು ಯೋಚನಾಶಕ್ತಿ ಎಲ್ಲಿಂದ ಲಭಿಸಿತ್ತು ಎಂದು ಲೋಕ ಜನರು ಆಶ್ಚರ್ಯಪಡುತ್ತಾರೆ. ಅವರಿಗೆ ಎಲ್ಲವೂ ಪವಿತ್ರ ಖುರ್‌ಆನಿನಿಂದ ಲಭಿಸಿತ್ತು ಎಂದು ನಾನು ಹೇಳುತ್ತೇನೆ. ಅವರು ಪವಿತ್ರ ಖುರ್‌ಆನನ್ನು ಗಮನವಿಟ್ಟು ಓದಿಕೊಂಡು ಚಿಂತನ ಮಂಥನ ಮಾಡಿದರು. ಆದ್ದರಿಂದ ಸಂಪೂರ್ಣ ಲೋಕಕ್ಕೆ ಅರಿಯದ ಸಂಗತಿಗಳು ಅವರಿಗೆ ಗೊತ್ತಾಗುತ್ತಿತ್ತು ಮತ್ತು ಅದರ ಜ್ಞಾನವಿತ್ತು. ಏಕೆಂದರೆ, ಪವಿತ್ರ ಖುರ್‌ಆನ್ ಎಂತಹ ಉಪಕರಣ ಅಥವಾ ಆಯುಧವೆಂದರೆ, ಅದರ ಮೂಲಕ ಹೃದಯವನ್ನು ಹರಿತಗೊಳಿಸುವಾಗ, ಸ್ವಚ್ಛಗೊಳಿಸುವಾಗ, ಹೃದಯವು ಎಷ್ಟು ಪರಿಶುದ್ಧವಾಗುತ್ತದೆ ಎಂದರೆ, ಸಕಲ ಲೋಕದ ಜ್ಞಾನ ಅಥವಾ ಅರಿವುಗಳು ಅದರಲ್ಲಿ ಕಾಣಲ್ಪಡುತ್ತವೆ. ಆಗ ಆ ವ್ಯಕ್ತಿಯ ಮುಂದೆ ಎಂತಹ ಒಂದು ಬಾಗಿಲು ತೆರೆಯಲ್ಪಡುತ್ತದೆ ಎಂದರೆ, ತಡೆದಿರಿಸಲಾದ ಅರಿವು ಕೂಡ, ಯಾವುದೇ ತಡೆಯಿಲ್ಲದೇ ಆ ವ್ಯಕ್ತಿಯ ಹೃದಯದಲ್ಲಿ ಅವತೀರ್ಣವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ಪವಿತ್ರ ಖುರ್‌ಆನನ್ನು ಓದಲು ಮತ್ತು ಅದರ ಕುರಿತು ಚಿಂತಿಸಲು ಪ್ರಯತ್ನಿಸಬೇಕು.

(ಅನ್ವಾರುಲ್ ಉಲೂಮ್, ಸಂಪುಟ–3, ಪುಟ–130–131)

ಹಝ್ರತ್ ಉಮರರ(ರ) ವಿನಯವಂತಿಕೆ ಮತ್ತು ನಮ್ರತೆಯ ಬಗ್ಗೆ ಒಂದು ವರದಿಯಲ್ಲಿ ಹೀಗೆ ಪ್ರಸ್ತಾಪ ಬರುತ್ತದೆ – ಜಬೀರ್ ಬಿನ್ ನಫೀರ್ ವರದಿ ಮಾಡುತ್ತಾರೆ – ಹಝ್ರತ್ ಉಮರ್‌ರೊಡನೆ ಒಂದು ಸಂಘವು ಹೀಗೆ ಹೇಳಿತು: ಹೇ ಅಮೀರಲ್ ಮೂಮಿನೀನ್, ನಿಮಗಿಂತ ಹೆಚ್ಚು ನ್ಯಾಯಪಾಲನೆ ಮಾಡುವ, ನಿಮಗಿಂತ ಹೆಚ್ಚು ಸತ್ಯವಂತರಾದ ಮತ್ತು ಕಪಟವಿಶ್ವಾಸಿಗಳೊಡನೆ ನಿಮಗಿಂತ ಹೆಚ್ಚು ಕಠಿಣರಾದ ಯಾರನ್ನೂ ನಾವು ಕಂಡಿಲ್ಲ. ನಿಸ್ಸಂಶಯವಾಗಿಯೂ ನೀವು ಹಝ್ರತ್ ಪೈಗಂಬರರ(ಸ) ನಂತರ ಜನರಲ್ಲಿ ಅತ್ಯಂತ ಉತ್ತಮರಾಗಿರುವಿರಿ. ಹೀಗೆ ಹೇಳಿದ ವ್ಯಕ್ತಿಯೊಡನೆ ಔಫ್ ಬಿನ್ ಮಾಲಿಕ್ ಹೇಳಿದರು: ಅಲ್ಲಾಹನಾಣೆ, ನೀನು ತಪ್ಪು ಹೇಳುತ್ತಿದ್ದೀಯ. ಖಂಡಿತವಾಗಿಯೂ ಹಝ್ರತ್ ಪೈಗಂಬರರ(ಸ) ನಂತರ ಹಝ್ರತ್ ಉಮರ್‌ಗಿಂತ ಉತ್ತಮರಾಗಿರುವ ವ್ಯಕ್ತಿಯನ್ನು ನಾವು ನೋಡಿದ್ದೇವೆ. ಅವರು ಯಾರೆಂದು ಹಝ್ರತ್ ಉಮರ್(ರ) ಹಝ್ರತ್ ಔಫ್‌ರೊಡನೆ ಕೇಳಿದರು. ಅವರು ಅಬೂಬಕ್ರ್ ಆಗಿರುವರು ಎಂದು ಔಫ್ ಹೇಳಿದರು. ಆಗ ಹಝ್ರತ್ ಉಮರ್(ರ) ಹೇಳಿದರು: ಔಫ್ ಸತ್ಯವನ್ನು ಹೇಳುತ್ತಿದ್ದಾರೆ. ಸಂಘದಲ್ಲಿ ಇದ್ದ ವ್ಯಕ್ತಿ ಹೇಳಿದ್ದು ತಪ್ಪು. ಅಲ್ಲಾಹನಾಣೆ, ಅಬೂಬಕ್ರ್ ಕಸ್ತೂರಿಗಿಂತ ಪರಿಶುದ್ಧರಾಗಿರುವರು ಮತ್ತು ನಾನು ನನ್ನ ಮನೆಯ ಒಂಟೆಗಿಂತ ಹೆಚ್ಚು ದಾರಿ ತಪ್ಪಿದವನಾಗಿದ್ದೇನೆ.

(ಕನ್ಝುಲ್ ಅಲ್‌ಮಾಲ್, ಸಂಪುಟ–6, ಕಿತಾಬ್ ಫಝಾಏಲುಸ್ಸಹಾಬ, ವರದಿ ಸಂಖ್ಯೆ–35624, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಬಾರಿ ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಬಕ್ರ್(ರ) ನಡುವೆ ಯಾವುದೇ ಒಂದು ವಿಷಯದಲ್ಲಿ ಜಗಳವಾಯಿತು. ಹಝ್ರತ್ ಉಮರ್(ರ) ಕೋಪ ಪ್ರಕೃತಿಯವರಾಗಿದ್ದರು. ಆದ್ದರಿಂದ ಸುಮ್ಮನೇ ಜಗಳ ಹೆಚ್ಚಾಗದಿರಲು ಆ ಸ್ಥಳದಿಂದ ಹೊರಟುಹೋಗುವುದು ಸರಿಯೆಂದು ಹಝ್ರತ್ ಅಬೂಬಕ್ರ್(ರ) ಭಾವಿಸಿದರು. ಹೋಗಲು ತಯಾರಾದಾಗ, ಹಝ್ರತ್ ಉಮರ್(ರ) ಮುಂದಕ್ಕೆ ಧಾವಿಸಿ, ನನ್ನ ಮಾತಿಗೆ ಉತ್ತರ ಕೊಡಿರಿ ಎಂದು ಹೇಳಿ ಅಬೂಬಕ್ರ್‌ರ(ರ) ಅಂಗಿಯನ್ನು ಹಿಡಿದರು. ಹಝ್ರತ್ ಅಬೂಬಕ್ರ್(ರ) ಅದನ್ನು ಬಿಡಿಸಲು ನೋಡಿದಾಗ ನಿಲುವಂಗಿ ಹರಿದುಹೋಯಿತು. ಹಝ್ರತ್ ಅಬೂಬಕ್ರ್(ರ) ಅಲ್ಲಿಂದ ಮನೆಗೆ ಹೊರಟರು. ಆದರೆ ಹಝ್ರತ್ ಅಬೂಬಕ್ರ್(ರ) ಹಝ್ರತ್ ಪೈಗಂಬರರಿಗೆ(ರ) ಹಝ್ರತ್ ಉಮರರ(ರ) ಬಗ್ಗೆ ದೂರು ಕೊಡಲು ಹೋಗಿರುವರು ಎಂದು ಭಾವಿಸಿ ಹಝ್ರತ್ ಉಮರ್(ರ) ಕೂಡ ಅವರ ಹಿಂದೆ ಹಿಂದೆ ಹೊರಟರು. ಅವರು ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ತಲುಪಿದರು. ಆದರೆ ಅಲ್ಲಿ ಹಝ್ರತ್ ಅಬೂಬಕರ್(ರ) ಇದ್ದಿರಲಿಲ್ಲ. ಆದರೆ ಹಝ್ರತ್ ಉಮರರ(ರ) ಹೃದಯದಲ್ಲಿ ಅಷ್ಟರಲ್ಲಿ ಪಶ್ಚಾತ್ತಾಪ ಉಂಟಾಗಿತ್ತು. ಆದ್ದರಿಂದ ಅವರು ಹೇಳಿದರು: ಯಾ ರಸೂಲಲ್ಲಾಹ್, ನನ್ನಿಂದ ತಪ್ಪಾಯಿತು. ನಾನು ಅಬೂಬಕ್ರ್‌ರೊಂದಿಗೆ ಕಠಿಣವಾಗಿ ವರ್ತಿಸಿದೆ. ಹಝ್ರತ್ ಅಬೂಬಕ್ರ್‌ರ ಯಾವುದೇ ತಪ್ಪಿಲ್ಲ. ತಪ್ಪು ನನ್ನದೇ. ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದಾಗ, ನಿಮ್ಮ ಬಗ್ಗೆ ದೂರ ಕೊಡಲು ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರ(ಸ) ಬಳಿಗೆ ಹೋಗಿರುವರು ಎಂದು ಯಾರೋ ಒಬ್ಬರು ಹಝ್ರತ್ ಅಬೂಬಕರ್‌ರ(ರ) ಬಳಿಗೆ ಹೋಗಿ ಹೇಳಿದರು. ತನ್ನ ದೃಷ್ಟಿಕೋನವನ್ನು ಕೂಡ ಹಝ್ರತ್ ಪೈಗಂಬರ್‌ರಿಗೆ(ಸ) ಹೇಳಿಕೊಡಬೇಕು, ತನ್ನ ಮಾತನ್ನು ಸಹ ತಿಳಿಸಬೇಕು ಎಂದು ಹಝ್ರತ್ ಅಬೂಬಕ್ರ್(ರ) ಯೋಚಿಸಿದರು. ಹಝ್ರತ್ ಅಬೂಬಕ್ರ್(ರ) ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ತಲುಪಿದಾಗ ಹಝ್ರತ್ ಉಮರ್(ರ) ಹೀಗೆ ಹೇಳುತ್ತಿದ್ದರು: ಯಾ ರಸೂಲಲ್ಲಾಹ್, ನನ್ನಿಂದ ತಪ್ಪಾಗಿದೆ, ನಾನು ಹಝ್ರತ್ ಅಬೂಬಕ್ರ್‌ರೊಡನೆ ಜಗಳ ಮಾಡಿದೆ. ಅವರ ಅಂಗಿ ನನ್ನಿಂದ ಹರಿದುಹೋಯಿತು. ಈ ಮಾತನ್ನು ಹಝ್ರತ್ ಪೈಗಂಬರ್(ಸ) ಕೇಳಿದಾಗ, ಹಝ್ರತ್ ಪೈಗಂಬರರ(ಸ) ಮುಖದಲ್ಲಿ ಕೋಪದ ಲಕ್ಷಣಗಳು

ಕಾಣಲ್ಪಡುತ್ತಿದ್ದುವು. ಹಝ್ರತ್ ಪೈಗಂಬರ್(ಸ) ಹೇಳಿದರು: ಎಲೈ ಜನರೇ, ನಿಮಗೇನಾಗಿದೆ, ಸಕಲ ಲೋಕ ನನ್ನನ್ನು ನಿರಾಕರಿಸುತ್ತಿದ್ದಾಗ ಮತ್ತು ನೀವು ನನ್ನ ವಿರೋಧಿಯಾಗಿದ್ದಾಗ, ಕೇವಲ ಅಬೂಬಕ್ರ್ ನನ್ನನ್ನು ನಂಬಿದ್ದರು. ಎಲ್ಲ ರೀತಿಯಲ್ಲೂ ನನಗೆ ನೆರವು ನೀಡಿದರು. ಅನಂತರ ದುಃಖದಿಂದ ಹೇಳಿದರು: ಈಗಲೂ ನೀವು ನನ್ನನ್ನು ಮತ್ತು ಅಬೂಬಕ್ರ್‌ರನ್ನು ಸುಮ್ಮನೆ ಬಿಡುವುದಿಲ್ಲವೇ? ಹೀಗೆ ಹೇಳುತ್ತಿದ್ದಾಗ ಹಝ್ರತ್ ಅಬೂಬಕ್ರ್(ರ) ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ತಲುಪಿದರು. ಹಝ್ರತ್ ಪೈಗಂಬರರ(ಸ) ಹೃದಯದಲ್ಲಿ ದುಃಖದ ಅನುಭವವಾಗುತ್ತಿದೆ ಎಂದು ಅವರು ನೋಡಿದಾಗ, ಒಬ್ಬ ಸತ್ಯಪ್ರೇಮಿಯ ಹಾಗೆ ಅದನ್ನು ಹಝ್ರತ್ ಅಬೂಬಕ್ರ್‌ರಿಗೆ(ರ) ಸಹಿಸಲಾಗಲಿಲ್ಲ. ಅವರ ಕಾರಣದಿಂದ ಹಝ್ರತ್ ಪೈಗಂಬರ್(ಸ) ದುಃಖಿತರಾಗುವುದನ್ನು ಹಝ್ರತ್ ಅಬೂಬಕ್ರ್(ರ) ಇಷ್ಟಪಡಲಿಲ್ಲ. ಆದ್ದರಿಂದ ಹಝ್ರತ್ ಅಬೂಬಕ್ರ್(ರ) ಬಂದ ಕೂಡಲೇ ಹಝ್ರತ್ ಪೈಗಂಬರರ(ಸ) ಮುಂದೆ ಮೊಣಕಾಲೂರಿ ಕುಳಿತುಕೊಂಡರು ಮತ್ತು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ತಪ್ಪು ಉಮರ್‌ರದಲ್ಲ, ತಪ್ಪು ನನ್ನದೇ ಆಗಿತ್ತು. (ಖುತ್ಬಾತೆ ಮಹ್ಮೂದ್, ಸಂಪುಟ-27, ಪುಟ-313-314)

ಮಹಿಳೆಯ ಗರ್ಭದಲ್ಲಿರುವ ಶಿಶುವನ್ನು ಹತ್ಯೆ ಮಾಡಿದರೆ ಅದರ ಪ್ರಾಯಶ್ಚಿತವೇನೆಂದು ಹಝ್ರತ್ ಉಮರ್(ರ) ಜನರೊಡನೆ ಒಮ್ಮೆ ಕೇಳಿದರು. ಒಬ್ಬ ಗುಲಾಮ ಅಥವಾ ದಾಸಿಯ ಮೌಲ್ಯದಷ್ಟನ್ನು ಪ್ರಾಯಶ್ಚಿತವಾಗಿ ನೀಡಲು ಹಝ್ರತ್ ಪೈಗಂಬರ್(ಸ) ತೀರ್ಮಾನ ಮಾಡಿದ್ದರು ಎಂದು ಮುಗ್ಯೈರ ಹೇಳಿದರು. ಈ ಸಂಗತಿಗೆ ನಿನ್ನೊಂದಿಗೆ ಸಾಕ್ಷ್ಯ ನೀಡುವ ಯಾರನ್ನಾದರೂ ಕೊಂಡುಬಾ ಎಂದು ಹಝ್ರತ್ ಉಮರ್(ರ) ಹೇಳಿದರು. ಆಗ ಮುಹಮ್ಮದ್ ಬಿನ್ ಮಸ್ಲಮ ಹೀಗೆ ಸಾಕ್ಷ್ಯವಹಿಸಿದರು: ನಾನು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಿದ್ದಾಗ ಹಝ್ರತ್ ಪೈಗಂಬರ್(ಸ) ಹೀಗೆ ತೀರ್ಪು ನೀಡಿದ್ದರು. (ಸಹೀಹ್ ಬುಖಾರಿ, ಕಿತಾಬುದ್ದಿಯಾತ್, ವರದಿ-6905-6906) ಎಂದರೆ ಯಾವುದಾದರೂ ದೌರ್ಜನ್ಯದ ಕಾರಣದಿಂದ ಅಥವಾ ಒತ್ತಾಯಪೂರ್ವಕವಾಗಿ ಸ್ತ್ರೀಯೊಬ್ಬಳ ಗರ್ಭದಲ್ಲಿರುವ ಮಗುವನ್ನು ಬೀಳಿಸಿದರೆ, ಕೊಂದುಹಾಕಿದರೆ, ಆ ಪಾಪಕ್ಕೆ ದೌರ್ಜನ್ಯ ಮಾಡಿದವನು ಪ್ರಾಯಶ್ಚಿತವಾಗಿ ಒಬ್ಬಳು ದಾಸಿ ಅಥವಾ ಗುಲಾಮನನ್ನು ಸ್ವತಂತ್ರಗೊಳಿಸಬೇಕು.

ಹಝ್ರತ್ ಅಬೂಸಈದ್ ವರದಿ ಮಾಡುತ್ತಾರೆ: ಹಝ್ರತ್ ಅಬೂಮೂಸಾ ಅಶ್‌ಅರಿ(ರ) ಹಝ್ರತ್ ಉಮರರ(ರ) ಬಳಿಗೆ ಬಂದು ಅಸ್ಸಲಾಮು ಅಲೈಕುಂ ಎಂದು ಹೇಳಿ ಒಳಗೆ ಬರಲು ಅನುಮತಿ ಕೇಳಿದರು. ಅನುಮತಿ ಸಿಗದಿದ್ದಾಗ, ಸ್ವಲ್ಪ ಸಮಯ ಸುಮ್ಮನಿದ್ದುಕೊಂಡು ಅವರು ಅಸ್ಸಲಾಮು ಅಲೈಕುಂ ಎಂದು ಹೇಳಿ ಒಳಗೆ ಬರಲು ಪುನಃ ಅನುಮತಿ ಕೇಳಿದರು. ಎರಡನೇ ಬಾರಿಯೂ ಹಝ್ರತ್ ಉಮರ್(ರ) ಮೌನವಾಗಿದ್ದರು. ಸ್ವಲ್ಪ ಸಮಯ ಸುಮ್ಮನಿದ್ದುಕೊಂಡು ಹಝ್ರತ್ ಅಬೂಮೂಸಾ(ರ) ಮೂರನೇ ಬಾರಿ ಅಸ್ಸಲಾಮು ಅಲೈಕುಂ ಎಂದು ಹೇಳಿ ಒಳಗೆ ಬರಲು ಅನುಮತಿ ಕೇಳಿದರು. ಮೂರು ಬಾರಿಯ ನಂತರವೂ ಉತ್ತರ ಸಿಗದಿದ್ದಾಗ ಅಬೂಮೂಸಾ(ರ) ಅಲ್ಲಿಂದ ಮರಳಿಹೋದರು. ಅಬೂಮೂಸಾ ಏನು ಮಾಡಿರುವರು ಎಂದು ಹಝ್ರತ್ ಉಮರ್(ರ) ಕಾವಲುಗಾರನೊಡನೆ ಕೇಳಿದರು. ಮರಳಿ ಹೋದರು ಎಂದು ಕಾವಲುಗಾರನು ಹೇಳಿದನು. ಅವರನ್ನು ಕರೆದು ನನ್ನ ಬಳಿಗೆ ತನ್ನಿರಿ ಎಂದು ಕಾವಲುಗಾರನೊಡನೆ ಹಝ್ರತ್ ಉಮರ್(ರ) ಹೇಳಿದರು. ಹಾಗೆ ಅವರು ಹಝ್ರತ್ ಉಮರ್‌ರ(ರ) ಬಳಿಗೆ ಬಂದಾಗ, ನೀವೇಕೆ ಹೀಗೆ ಮಾಡಿದ್ದೀರಿ ಎಂದು ಕೇಳಿದರು. ಅಬೂಮೂಸಾ(ರ) ಹೇಳಿದರು: ನಾನು ಸುನ್ನತ್ ಪ್ರಕಾರ ವರ್ತಿಸಿದೆ ಎಂದರೆ, ನಾನು ಪ್ರವಾದಿಚರ್ಯೆಯನ್ನು ಅನುಸರಿಸಿದ್ದೇನೆ. ಹಝ್ರತ್ ಉಮರ್(ರ) ಹೇಳಿದರು: ಸುನ್ನತ್ ಪ್ರಕಾರವೇ? ಅಲ್ಲಾಹನಾಣೆ, ಇದು ಸುನ್ನತ್ ಆಗಿದೆ ಎಂಬುದಕ್ಕೆ ನೀವು ಪುರಾವೆ ಮತ್ತು ಸಾಕ್ಷ್ಯವನ್ನು ನೀಡಬೇಕು. ಇಲ್ಲದಿದ್ದರೆ ನಿನ್ನೊಂದಿಗೆ ನಾನು ಕಠಿಣವಾಗಿ ವರ್ತಿಸುವೆನು. ಅಬೂ ಸಅದ್(ರ) ಹೇಳುತ್ತಾರೆ: ಆಗ ಅಬೂಮೂಸಾ(ರ) ನಮ್ಮ ಬಳಿಗೆ ಬಂದರು. ಆ ಸಮಯದಲ್ಲಿ ಅನ್ಸಾರ್ ಸಹಾಬಿಗಳಾದ ನಾವೆಲ್ಲರೂ, ಒಂದು ಕೂಟ ಜನರೊಂದಿಗೆ ಕುಳಿತುಕೊಂಡಿದ್ದೆವು. (ಅನ್ಸಾರ್ ಸಹಾಬಿಗಳು ಎಂದರೆ, ಮದೀನದಲ್ಲಿದ್ದ ಹಝ್ರತ್ ಪೈಗಂಬರರ(ಸ) ಸಹಾಬಿಗಳು.) ಅಬೂ ಮೂಸಾ(ರ) ಬಂದು ಹೇಳಿದರು: ಎಲೈ ಅನ್ಸಾರ್ ಸಂಘವೇ, ನೀವು ಹಝ್ರತ್ ಪೈಗಂಬರರ(ಸ) ಹದೀಸನ್ನು ಇತರ ಜನರಿಗಿಂತ ಹೆಚ್ಚು ತಿಳಿದವರು ಅಲ್ಲವೇ? ಅಲ್ **ಇಸ್‌ತಇಧು ಸಲಾಸುನ್**, ಎಂದರೆ ಮೂರು ಬಾರಿ ಅನುಮತಿ ಕೇಳಬೇಕು ಎಂದು ಹಝ್ರತ್ ಪೈಗಂಬರ್(ಸ) ಹೇಳಿರಲಿಲ್ಲವೇ? ಅನುಮತಿ ಲಭಿಸಿದರೆ, ಮನೆಗೆ ಪ್ರವೇಶಿಸಿರಿ, ಅನುಮತಿ ಲಭಿಸದಿದ್ದರೆ ಮರಳಿ ಹೋಗಿರಿ ಎಂದು. ಇದನ್ನು ಕೇಳಿ ಜನರು ಅಪಹಾಸ್ಯ ಮಾಡಲು ತೊಡಗಿದರು. ಅಬೂಸಈದ್ ಖುದ್‌ರಿ ಹೇಳುತ್ತಾರೆ: ನಾನು ಅಬೂಮೂಸಾ ಅಶ್‌ಅರಿ ಕಡೆಗೆ ಎತ್ತಿ ನೋಡಿ ಹೇಳಿದೆ: ಈ ಸಂಬಂಧವಾಗಿ ನಿಮಗೆ ಏನೂ ಶಿಕ್ಷೆ ಲಭಿಸಿದರೂ ನಾನು ಅದರ ಪಾಲುದಾರನಾಗುವೆನು. ನೀವು ಸರಿಯಾಗಿ ಹೇಳಿದ್ದೀರಿ ಎಂದು ನಾನು ಸಾಕ್ಷ್ಯವಹಿಸುತ್ತೇನೆ. ಅನಂತರ ಅಬೂ ಸಈದ್(ರ) ಹಝ್ರತ್ ಉಮರರ ಸನ್ನಿಧಿಗೆ ಬಂದರು ಮತ್ತು ಅವರಿಗೆ ಈ ಹದೀಸ್ ಬಗ್ಗೆ ತಿಳಿಸಿಕೊಟ್ಟರು. ಹಝ್ರತ್ ಉಮರ್(ರ) ಹೇಳಿದರು: ಸರಿ, ನನಗೆ ಈ ಹದೀಸ್ ಬಗ್ಗೆ ಗೊತ್ತಿರಲಿಲ್ಲ. ಈಗ ಗೊತ್ತಾಯಿತು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಇಸ್ತಿನ್‌ಝಾನ್, ಹದೀಸ್-2690)

ಸಹೀಹ್ ಮುಸ್ಲಿಮಿನಲ್ಲಿ ಹಝ್ರತ್ ಅಬೂಹುರೈರ(ರ) ಹೇಳಿದ್ದಾಗಿ ಹೀಗೆ ವರದಿಯಾಗಿದೆ: ನಾವು ಹಝ್ರತ್ ಪೈಗಂಬರರ(ಸ) ಸುತ್ತ ಕುಳಿತುಕೊಂಡಿದ್ದೆವು. ಹಝ್ರತ್ ಅಬೂಬಕ್ರ್(ರ) ಮತ್ತು ಹಝ್ರತ್ ಉಮರ್(ರ) ಸಮೇತ ಬೇರೆ ಜನರು ಸಹ ಇದ್ದರು. ಹಝ್ರತ್ ಪೈಗಂಬರ್(ಸ) ನಮ್ಮ ನಡುವಿನಿಂದ ಎದ್ದು ಹೋದರು. ಮರಳಿ ಬರಲು ತಡವಾಯಿತು. ನಮ್ಮಿಂದ ಹಝ್ರತ್ ಪೈಗಂಬರ್(ಸ) ದೂರವಾಗದಿರಲಿ ಎಂದು ನಾವು ಭಯಪಟ್ಟು ನಾವು ಕೂಡ ಎದ್ದೆವು. ಮೊತ್ತಮೊದಲು ನಾನು ಚಿಂತಿತನಾಗಿ ಹಝ್ರತ್ ಪೈಗಂಬರ್‌ರನ್ನು(ರ) ಹುಡುಕಲು ಹೊರಗೆ ಬಂದೆನು. ಹೀಗೆ ನಾನು ಬನೂ ನಜ್ಜಾರಿಗೆ ಸೇರಿದ್ದ ಅನ್ಸಾರ್‌ರ ಒಂದು ತೋಟದ ಬಳಿಗೆ ಹೋದೆನು. ನಾನು ಅದರ ಪ್ರವೇಶದ್ವಾರವನ್ನು, ಬಾಗಿಲನ್ನು ಹುಡುಕಲಿಕ್ಕಾಗಿ ಅದರ ಸುತ್ತ ನಡೆದೆನು. ಆದರೆ ಅದರ ಬಾಗಿಲನ್ನು ಕಾಣಲಿಲ್ಲ. ನೀರಿನ ಒಂದು ದೊಡ್ಡ ಪೈಪು ಒಂದು ಬಾವಿಯಿಂದ ತೋಟದ ಕಡೆಗೆ ಇತ್ತು. ನಾನು ತೋಳದ ಹಾಗೆ ಮುದುಡಿಕೊಂಡು ನಾಲೆಯ ಮೂಲಕ ಹಝ್ರತ್ ಪೈಗಂಬರರ(ಸ) ಬಳಿಗೆ ತಲುಪಿದೆ. ಅಬು ಹುರೈರ! ಎಂದು ಹಝ್ರತ್ ಪೈಗಂಬರ್(ಸ) ಕರೆದರು. ಯಾ ರಸೂಲುಲ್ಲಾಹ್ ಎಂದು ನಾನು ಹೇಳಿದೆ. ಏನಾಯಿತು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ನಾನು ಹೇಳಿದೆ: ನೀವು; ನನ್ನ ನಡುವೆ ಇದ್ದೀರಿ. ಅನಂತರ ನೀವು ಎದ್ದು ಹೋಗಿದ್ದೀರಿ. ಆದರೆ ಮರಳಿ ಬರದದ್ದನ್ನು ಕಾಣದ ಕಾರಣದಿಂದ ನೀವು ನಮ್ಮಿಂದ ಬೇರೆಯಾಗುವುದನ್ನು ಯೋಚಿಸಿ ನಾವು ಹೆದರಿದೆವು. ಮೊತ್ತಮೊದಲು ನನಗೆ ಅದರ ಚಿಂತೆಯಾಯಿತು. ಆದ್ದರಿಂದ ನಾನು ತೋಳದ ಹಾಗೆ ಮುದುಡಿಕೊಂಡು ತೋಟದೊಳಗೆ ಪ್ರವೇಶಿಸಿದೆ ಮತ್ತು ಜನರು ನನ್ನ ಹಿಂದೆ ಇರುವರು. ಹಝ್ರತ್ ಪೈಗಂಬರ್(ಸ) ತನ್ನ ಬೂಟಿನ ಜೋಡಿಯಲ್ಲಿ ನೀಡುತ್ತಾ ಹೇಳಿದರು: ಹೇ ಅಬೂಹುರೈರ, ನನ್ನ ಈ ಬೂಟನ್ನು ಕೊಂಡುಹೋಗು. ತೋಟದ ಹೊರಗೆ ನಿನ್ನನ್ನು ಭೇಟಿಯಾಗುವವರಲ್ಲಿ ಯಾರಾದರೂ ಅಲ್ಲಾಹನಲ್ಲದೇ ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲವೆಂದು ಸಾಕ್ಷ್ಯವಹಿಸಿಕೊಂಡು ಅದನ್ನು ತನ್ನ ಮನಸ್ಸಲ್ಲಿ ದೃಢವಾಗಿ ನಂಬುತ್ತಾನೋ ಅವನಿಗೆ ಸ್ವರ್ಗದ ಸುವಾರ್ತೆಯನ್ನು ನೀಡು.

ಹಝ್ರತ್ ಅಬೂಹುರೈರ(ರ) ಹೇಳುತ್ತಾರೆ: ನಾನು ಹೊರಟಾಗ ಮೊತ್ತಮೊದಲು ಹಝ್ರತ್ ಉಮರ್(ರ) ಭೇಟಿಯಾದರು ಮತ್ತು ಹೀಗೆ ಕೇಳಿದರು: ಹೇ ಅಬೂಹುರೈರ, ಈ ಪಾದರಕ್ಷೆ ಎಲ್ಲಿಂದ? ಇದು ಹಝ್ರತ್ ಪೈಗಂಬರರ(ಸ) ಪಾದರಕ್ಷೆಯಾಗಿದೆ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಇದನ್ನು ನನಗೆ ಗುರುತಾಗಿ ನೀಡಿರುವರು. ನನ್ನನ್ನು ಭೇಟಿಯಾಗುವವರಲ್ಲಿ ಯಾರಾದರೂ ಅಲ್ಲಾಹನಲ್ಲದೇ ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲವೆಂದು ಸಾಕ್ಷ್ಯವಹಿಸಿಕೊಂಡು ಅದನ್ನು ತನ್ನ ಮನಸ್ಸಲ್ಲಿ ದೃಢವಾಗಿ ನಂಬುತ್ತಾನೋ ಅವನಗೆ ಸ್ವರ್ಗದ ಸುವಾರ್ತೆಯನ್ನು ನೀಡು ಎಂದು ಹೇಳಿ ನನಗೆ ಈ ಪಾದರಕ್ಷೆಯನ್ನು ನೀಡಿ ಕಳುಹಿಸಿರುವರು ಎಂದು ನಾನು ಹೇಳಿದೆ. ಆಗ ಹಝ್ರತ್ ಉಮರ್(ರ) ಜೋರಾಗಿ ಕೋಪದಿಂದ ನನ್ನ ಎದೆಯ ಮೇಲೆ ಕೈಯಿಂದ ತಳ್ಳಿದರು. ನಾನು ಕೆಳಗೆ ಬಿದ್ದುಬಿಟ್ಟೆನು. ಹಝ್ರತ್ ಉಮರ್(ರ) ಹೇಳಿದರು: ಎಲೈ ಅಬೂಹುರೈರ, ಮರಳಿ ಹೋಗು. ಯಾರೊಡನೆಯೂ ಏನೂ ಹೇಳಬೇಕಾದ ಆವಶ್ಯಕತೆಯಿಲ್ಲ. ಹಝ್ರತ್ ಅಬೂಹುರೈರ(ರ) ಹೇಳುತ್ತಾರೆ: ನಾನು ಹಝ್ರತ್ ಪೈಗಂಬರರ(ಸ) ಬಳಿಗೆ ಮರಳಿಹೋದೆನು. ನಾನು ಅತ್ತೇ ಬಿಡುತ್ತಿದ್ದೆ. ಅಷ್ಟರಲ್ಲಿ ಹಝ್ರತ್ ಉಮರ್(ರ) ನನ್ನ ಹಿಂದೆಯೇ ಬಂದರು. ನಿನಗೇನಾಯಿತು ಅಬೂಹುರೈರ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ನಾನು ಹೇಳಿದೆ: ನಾನು ಉಮರ್‌ರನ್ನು ಭೇಟಿಯಾದೆನು. ನೀವು ಹೇಳಿ ಕಳುಹಿಸಿದ ಸಂಗತಿಯನ್ನು ಅವರಿಗೆ ಹೇಳಿಕೊಟ್ಟೆನು. ಆಗ ಉಮರ್ ನನ್ನ ಎದೆಗೆ ಹೊಡೆದರು. ಆಗ ನಾನು ನೆಲಕ್ಕೆ ಬಿದ್ದುಬಿಟ್ಟೆ. ಅವರು ನನ್ನೊಡನೆ ಮರಳಿ ಹೋಗಲು ಹೇಳಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: ಹೇ ಉಮರ್, ನೀನೇಕೆ ಹೀಗೆ ಮಾಡಿದ್ದೀಯ. ಹಝ್ರತ್ ಉಮರ್(ರ) ಹೇಳಿದರು: ನನ್ನ ತಂದೆತಾಯಂದಿರು ನಿಮಗೆ ಅರ್ಪಣವಾಗಲಿ. ಅವರನ್ನು ಭೇಟಿಯಾಗುವವರಲ್ಲಿ ಯಾರಾದರೂ

ಅಲ್ಲಾಹನಲ್ಲದೇ ಆರಾಧನೆಗೆ ಅರ್ಹ ಬೇರೆ ಯಾರೂ ಇಲ್ಲವೆಂದು ಸಾಕ್ಷ್ಯವಹಿಸಿಕೊಂಡು ಅದನ್ನು ತನ್ನ ಮನಸ್ಸಲ್ಲಿ ದೃಢವಾಗಿ ನಂಬುತ್ತಾನೋ ಅವನಿಗೆ ಸ್ವರ್ಗದ ಸುವಾರ್ತೆಯನ್ನು ನೀಡು ಎಂದು ಹೇಳಿ ನೀವು ನಿಮ್ಮ ಪಾದರಕ್ಷೆಯನ್ನು ನೀಡಿ ಅಬೂಹುರೈರನ್ನು ಕಳುಹಿಸಿದ್ದೀರೋ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆಗ ಹಝ್ರತ್ ಉಮರ್(ರ) ಹೀಗೆ ವಿನಂತಿಸಿದರು: ಹೀಗೆ ಮಾಡಬೇಡಿರಿ, ಏಕೆಂದರೆ ಹಾಗಾದರೆ ಜನರು ಇದರ ಭರವಸೆಯಲ್ಲಿ ಇರುವರು. ಆದ್ದರಿಂದ ಜನರು ಯಥಾರ್ಥ ಸತ್ಯವಿಶ್ವಾಸಿಯಾಗಲಿಕ್ಕಾಗಿ ಒಳಿತಿನ ಬಗ್ಗೆ ಇರುವ ಆದೇಶಗಳ ಪ್ರಕಾರ ಸತ್ಕರ್ಮಗಳನ್ನು ಮಾಡಲಿ. ಇಲ್ಲದಿದ್ದರೆ, **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವುದೇ ಸ್ವರ್ಗ ಲಭಿಸಲು ಸಾಕೆಂದ್ಯೆ ಇದೇ ಸ್ವರ್ಗದ ಸುವಾರ್ತೆಯೆಂದು ಭಾವಿಸಿ ಅದರ ಭರವಸೆಯಲ್ಲಿ ಮಾತ್ರ ಕುಳಿತುಕೊಳ್ಳುವರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ, ಹೋಗಲಿಬಿಡು, ಸರಿ ಹಾಗಾಯೇ ಮಾಡೋಣ, ಬಹಳ ಮುನ್ನೆಚ್ಚರಿಕೆಯ ಸ್ವಭಾವವನ್ನು ಹಝ್ರತ್ ಉಮರ್(ರ) ಹೊಂದಿದ್ದರು. (ಸಹೀಹ್ ಮುಸ್ಲಿಮ್ ಕಿತಾಬುಲ್ ಈಮಾನ್, ಹದೀಸ್–147)

ಹಝ್ರತ್ ಉಮರ್‌ರನ್ನು(ರ) ಹೆದರಿ ಶೈತಾನನು ಸಹ ಓಡಿಹೋಗುತ್ತಾನೆ ಎಂಬುದರ ಬಗ್ಗೆ ಕೆಲವು ವರದಿಗಳಿವೆ. ಸಹೀಹ್ ಬುಖಾರಿಯಲ್ಲಿ ಒಂದು ವರದಿಯಿದೆ. ಹಝ್ರತ್ ಸಅದ್ ಬಿನ್ ವಖಾಸ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್‌ರೊಡನೆ(ಸ) ಒಳಗೆ ಪ್ರವೇಶಿಸಲು ಅನುಮತಿ ಕೇಳಿದರು. ಆ ಸಮಯದಲ್ಲಿ ಹಝ್ರತ್ ಪೈಗಂಬರರ(ಸ) ಬಳಿ ಖುರೈಶಿನ ಕೆಲವು ಮಹಿಳೆಯರು ಕುಳಿತುಕೊಂಡು ಮಾತನಾಡುತ್ತಿದ್ದರು. ಪೈಗಂಬರ್‌ರೊಡನೆ(ಸ) ಹೆಚ್ಚಿನ ಖರ್ಚನ್ನು ಬೇಡುತ್ತಿದ್ದರು. ಆ ಮಹಿಳೆಯರ ಶಬ್ದವು ಹಝ್ರತ್ ಪೈಗಂಬರ್‌ರ(ಸ) ಶಬ್ದಕ್ಕಿಂತ ಉಚ್ಚಸ್ವರದ್ದಾಗಿತ್ತು. ಹಝ್ರತ್ ಉಮರ್(ರ) ಒಳಗೆ ಬರಲು ಅನುಮತಿ ಕೇಳಿದಾಗ, ಆ ಮಹಿಳೆಯರು ಬೇಗನೇ ಎದ್ದು ಮರೆಯಾಗಿ ನಿಂತರು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್‌ರಿಗೆ(ರ) ಒಳಗೆ ಬರಲು ಅನುಮತಿ ಕೊಟ್ಟರು. ಹಝ್ರತ್ ಉಮರ್(ರ) ಒಳಗೆ ಬಂದಾಗ ಹಝ್ರತ್ ಪೈಗಂಬರ್(ಸ) ನಗುತ್ತಿದ್ದರು. ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನು ನಿಮ್ಮನ್ನು ಸದಾ ಮುಗುಳ್ನಗುತ್ತಾ ಇರಿಸಲಿ. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಬಳಿಯಲ್ಲಿದ್ದ ಮಹಿಳೆಯರ ಬಗ್ಗೆ ನಾನು ಅಚ್ಚರಿಪಡುತ್ತಿದ್ದೇನೆ. ಅವರು ನಿಮ್ಮ ಸ್ವರವನ್ನು ಕೇಳಿದಾಗ ಬೇಗನೇ ಒಳಗೆ ಹೋದರು. ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್, ಅವರು ನಿಮ್ಮನ್ನು ನನಗಿಂತ ಹೆಚ್ಚು ಹೆದರಬೇಕಾಗಿತ್ತು. ಅನಂತರ ಆ ಮಹಿಳೆಯರನ್ನು ಸಂಬೋಧಿಸಿ ಉಚ್ಚಸ್ವರದಲ್ಲಿ ಹೇಳಿದರು: ಎಲೈ ನಿಮ್ಮ ಜೀವಗಳ ಶತ್ರುಗಳೇ, ನೀವು ನನ್ನನ್ನು ಹೆದರುತ್ತಿದ್ದೀರೋ, ಹಝ್ರತ್ ಪೈಗಂಬರ್‌ರನ್ನು ಹೆದರುವುದಿಲ್ಲವೋ? ಮಹಿಳೆಯರು ಹೇಳಿದರು: ಹೌದು, ನೀವು ಬಹಳ ಕಠಿಣ ಸ್ವಭಾವದವರೂ, ಕಠಿನ ಹೃದಯಿಯೂ ಆಗಿರುವಿರಿ. ಆದರೆ ಹಝ್ರತ್ ಪೈಗಂಬರ್(ಸ) ಹಾಗೆಯಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಖತ್ತಾಬಿನ ಪುತ್ರಾ ಕೇಳು, ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನಾಣೆ, ಶೈತಾನನು ನಡೆಯುವ ರಸ್ತೆಯಲ್ಲಿ ನೀವು ಮುಂದೆ ಬರುವಾಗಲೆಲ್ಲ, ಅವನು ಖಂಡಿತ ಆ ಮಾರ್ಗವನ್ನು ಬಿಟ್ಟು ಬೇರೆ ರಸ್ತೆಯಿಂದ ಹೋಗುತ್ತಾನೆ. (ಸಹೀಹ್ ಬುಖಾರಿ, ಕಿತಾಬ್ ಫಝಾಎಲ್ ಅಸ್ಸಹಾಬ(ಸ) ಹದೀಸ್–3683)

ಹಝ್ರತ್ ಆಇಶ(ರ) ಹೇಳುತ್ತಾರೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ) ಕುಳಿತುಕೊಂಡಿದ್ದರು. ನಾವು ಬೊಬ್ಬೆಯನ್ನು ಮತ್ತು ಮಕ್ಕಳ ಸ್ವರವನ್ನು ಕೇಳಿದೆವು. ಹಝ್ರತ್ ಪೈಗಂಬರ್(ಸ) ನಿಂತುಕೊಂಡರು. ಅಲ್ಲಿ ಒಬ್ಬಳು ನೀಗ್ರೋ ಮಹಿಳೆ ತನ್ನ ಚಾತುರ್ಯವನ್ನು ತೋರಿಸುತ್ತಿದ್ದಳು. ಮಕ್ಕಳು ಅವಳ ಸುತ್ತ ಕೂಡಿಕೊಂಡಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಆಯಿಶ, ಬಂದು ನೋಡು. ನಾನು ಬಂದು ನನ್ನ ಗದ್ದವನ್ನು ಪೈಗಂಬರರ(ಸ) ಹೆಗಲ ಮೇಲೆ ಇರಿಸಿ ನೋಡಲು ಶುರುಮಾಡಿದೆ. ನಿನಗೆ ತೃಪ್ತಿಯಾಯಿತೇ ಎಂದು ಪೈಗಂಬರ್(ಸ) ನನ್ನೊಡನೆ ಕೇಳಿದರು. ನನ್ನ ಬಗ್ಗೆ ಎಷ್ಟು ಕಾಳಜಿಯಿದೆ ಎಂದು ನೋಡಲಿಕ್ಕಾಗಿ, ತೃಪ್ತಿಯಾಗಿಲ್ಲವೆಂದು ನಾನು ಹೇಳಿದೆ. ಹಝ್ರತ್ ಉಮರ್(ರ) ಬಂದಾಗ ಜನರು ಆ ಮಹಿಳೆಯ ಬಳಿಯಿಂದ ಓಡಿಹೋದರು. ಹಝ್ರತ್ ಆಯಿಶ ಹೇಳುತ್ತಾರೆ: ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಜಿನ್ನ್ ಮತ್ತು ಇನ್ಸ್‌ನ ಶೈತಾನರು ಉಮರ್‌ರಿಗೆ ಹೆದರಿ ಹೋಗುತ್ತಿರುವುದಾಗಿ ನಾನು ನೋಡಿದ್ದೇನೆ. ಅನಂತರ ನಾವು ಅಲ್ಲಿಂದ ಮರಳಿಬಂದೆವು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3691)

ಹಝ್ರತ್ ಬರೀದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಯಾವುದೋ ಒಂದು ಯುದ್ಧಕ್ಕಾಗಿ ಹೊರಟರು. ಅವರು ಯುದ್ಧದಿಂದ ಮರಳಿಬಂದಾಗ, ಕಪ್ಪು ಬಣ್ಣದ ಒಬ್ಬ ದಾಸಿ ಬಂದು ಹೇಳಿದಳು: ಹೇ ಅಲ್ಲಾಹನ ಪ್ರವಾದಿಯೇ, ಅಲ್ಲಾಹನು ನಿಮ್ಮನ್ನು ಸುರಕ್ಷಿತವಾಗಿ ಮರಳಿ ತಂದರೆ, ನಾನು ನಿಮ್ಮ ಮುಂದೆ ಡೋಲು ಬಾರಿಸಿ ಹಾಡುವೆ ಎಂದು ನಾನು ಅಲ್ಲಾಹನೊಡನೆ ಹರಕೆ ಮಾಡಿದ್ದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಹಾಗೆ ಹರಕೆ ಮಾಡಿರುವಿಯಾದರೆ, ಡೋಲು ಬಾರಿಸು, ಇಲ್ಲದಿದ್ದರೆ ಬೇಡ. ಹೀಗೆ ಅವಳು ಡಂಗುರ ಬಾರಿಸಲು ಶುರುಮಾಡಿದಳು. ಅಲ್ಲಿಗೆ ಹಝ್ರತ್ ಅಬೂಬಕರ್(ರ) ಬಂದರು, ಆಗಲೂ ಅವಳು ಡಂಗುರ ಬಾರಿಸುತ್ತಿದ್ದಳು. ಹಝ್ರತ್ ಅಲಿ(ರ) ಅಲ್ಲಿಗೆ ಬಂದರು. ಆಗಲೂ ಅವಳು ಡಂಗುರ ಬಾರಿಸುತ್ತಿದ್ದಳು. ಅನಂತರ ಹಝ್ರತ್ ಉಸ್ಮಾನ್(ರ) ಬಂದರು. ಆಗಲೂ ಅವಳು ಡೋಲು ಬಾರಿಸುತ್ತಿದ್ದಳು. ಅನಂತರ ಹಝ್ರತ್ ಉಮರ್(ರ) ಬಂದಾಗ ಅವಳು ತನ್ನ ಡಂಗುರವನ್ನು ಕೆಳಗೆ ಇರಿಸಿದಳು ಮತ್ತು ಅವಳು ಅದರ ಮೇಲೆ ಕುಳಿತುಕೊಂಡಳು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಮರ್, ಶೈತಾನ್ ಕೂಡ ನಿನಗೆ ಹೆದರುತ್ತಾನೆ. ನಾನು ಕುಳಿತುಕೊಂಡಿದ್ದಾಗ ಅವಳು ಡಂಗುರ ಹೊಡೆಯುತ್ತಿದ್ದಳು, ಅನಂತರ ಅಬೂಬಕ್ರ್ ಬಂದರು, ಆಗಲೂ ಅವಳು ಡಂಗುರ ಬಾರಿಸುತ್ತಿದ್ದಳು. ಅನಂತರ ಅಲಿ ಬಂದರು.ಅವಳು ಡಂಗುರ ಬಾರಿಸುತ್ತಿದ್ದಳು. ಅನಂತರ ಉಸ್ಮಾನ್ ಬಂದರು. ಅವಳು ಡೋಲನ್ನುಬಾರಿಸುತ್ತಿದ್ದಳು, ಆದರೆ ಹೇ ಉಮರ್, ನೀನು ಬಂದಾಗ ಅವಳು ಡೋಲನ್ನು ಕೆಳಗಿಟ್ಟಳು. (ಸುನನ್ ಅತ್ತಿರ್‌ಮಿಝಿ, ಕಿತಾಭುಲ್ ಮನಾಖಿಬ್, ಹದೀಸ್–3690)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್‌ರೊಡನೆ ಹೀಗೆ ಹೇಳಿದ್ದರು: ಶೈತಾನನು ಯಾವುದಾದರೂ ರಸ್ತೆಯಲ್ಲಿ ಭೇಟಿಯಾದರೆ, ಅವನು ನಿನ್ನ ರಸ್ತೆಯನ್ನು ಬಿಟ್ಟು ಬೇರೆ ಮಾರ್ಗದಿಂದ ಹೋಗುವನು. ಅವನು ನಿನಗೆ ಹೆದರುತ್ತಾನೆ. ಶೈತಾನನು ನಪುಂಸಕನಂತೆ ಮತ್ತು ಒಬ್ಬ ನೀಚನಂತೆ ಹಝ್ರತ್ ಉಮರ್‌ರಿಗೆ ಹೆದರುತ್ತಿದ್ದನು. (ನೂರುಲ್ ಹಖ್, ಭಾಗ–1, ರೂಹಾನಿ ಖಝಾಇನ್, ಸಂಪುಟ–8, ಪುಟ–143)

ಹಝ್ರತ್ ಉಮರ್‌ರ ನಾಲಗೆ ಮತ್ತು ಹೃದಯದಲ್ಲಿ ಸತ್ಯ ಮತ್ತು ನೆಮ್ಮದಿ ಇರುವುದರ ಬಗ್ಗೆ ಹಝ್ರತ್ ಪೈಗಂಬರ್(ಸ) ಒಂದು ಬಾರಿ ಹೇಳಿರುವರು. ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಸತ್ಯವನ್ನು ಉಮರರ ನಾಲಗೆ ಮತ್ತು ಹೃದಯದಲ್ಲಿ ಜಾರಿಗೊಳಿಸಿದ್ದಾನೆ.

ಹಝ್ರತ್ ಇಬ್ನು ಅಬ್ಬಾಸ್(ರ) ಅವರ ಸಹೋದರನಾದ ಫಝ್ಲ್‌ನಿಂದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದೆನು: ನಾನು ಇಷ್ಟಪಡುವ ಜಾಗದಲ್ಲಿ ಉಮರ್ ಬಿನ್ ಖತ್ತಾಬ್ ಇರುತ್ತಾರೆ. ಉಮರ್ ಬಿನ್ ಖತ್ತಾಬ್ ಇಷ್ಟಪಡುವ ಜಾಗದಲ್ಲಿ ನಾನು ಇರುತ್ತೇನೆ. ನನ್ನ ನಂತರ ಉಮರ್ ಬಿನ್ ಖತ್ತಾಬ್ ಇರುವ ಜಾಗದಲ್ಲಿ ಸತ್ಯವಿರುವುದು. (ಸೀರತ್ ಉಮರ್ ಬಿನ್ ಖತ್ತಾಬ್, ಇಬ್ನ ಅಲ್‌ಜೂಝಿ, ಪುಟ–21, ಅಲ್‌ಮತ್‌ಬ ಅಲ್‌ಮಿಸ್ರೀಯ ಅಲ್‌ಝೂಹ್ರಿ)

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ನಾವು ಪರಸ್ಪರ ಮಾತುಕತೆ ನಡೆಸುತ್ತಿರುವಾಗ, ಹಝ್ರತ್ ಉಮರರ(ರ) ನಾಲಗೆ ಮತ್ತು ಹೃದಯದಲ್ಲಿ ಸಮಾಧಾನದ ಸ್ಥಿತಿ ಜಾರಿಯಾಗುತ್ತಿತ್ತು. (ಕನ್‌ಝುಲ್ ಆಮಾಲ್, ಸಂಪುಟ–6, ಭಾಗ–12, ಕಿತಾಬ್ ಫಝಾಎಲ್, ಫಝಾಎಲ್ ಉಮರ್, ವರದಿ ಸಂಖ್ಯೆ–35870, ದಾರುಲ್ ಕುತುಬ್ ಇಲ್‌ಮಿಯ 2004)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ಒಬ್ಬಳು ಪತ್ನಿಯೊಡನೆ ಹೇಳಿದರು: ನನ್ನ ಯಾತ್ರೆಯ ಸಾಮಾನುಗಳನ್ನು ತಯಾರು ಮಾಡಿಡಲು ಆರಂಭಿಸು. ಅವರು ಯಾತ್ರೆಯ ಸಾಮಾನುಗಳನ್ನು ಕಟ್ಟಿಡಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ಆಯಿಶರೊಡನೆ ಹೇಳಿದರು: ನನಗೆ ಧಾನ್ಯಗಳನ್ನು ಹುರಿದು ಪುಡಿ ಮಾಡಿ ತಯಾರು ಮಾಡಿಡು. ಇದೇ ತರಹದ ಆಹಾರಗಳು ಆ ಕಾಲಗಳಲ್ಲಿ ಇರುತ್ತಿದ್ದುವು. ಹೀಗೆ ಅವರು ಧಾನ್ಯಗಳಿಂದ ಕಲ್ಲುಗಳನ್ನು ಹೆಕ್ಕಿ ಬೇರ್ಪಡಿಸಲು ಶುರುಮಾಡಿದರು. ಹಝ್ರತ್ ಅಬೂಬಕ್ರ್(ರ) ಮಗಳನ್ನು ಭೇಟಿಯಾಗಲು ಮನೆಗೆ ಬಂದರು. ಈ ತಯಾರಿಯನ್ನು ಕಂಡು, ಏನು ಆಗುತ್ತಿದೆ ಎಂದು ಹಝ್ರತ್ ಆಯಿಶರೊಡನೆ(ರ) ಕೇಳಿದರು. ಅವರು ಹೇಳಿದರು: ಹಝ್ರತ್ ಪೈಗಂಬರ್(ಸ) ಯಾತ್ರೆಗೆ ತಯಾರಿ ನಡೆಸಲು ಹೇಳಿದ್ದರು. ಯಾವುದೋ ಯುದ್ಧದ ಉದ್ದೇಶವಿರಬೇಕು. ನಮಗೆ ಸರಿಯಾಗಿ ಗೊತ್ತಿಲ್ಲ.

ಯಾತ್ರೆಯ ಸಾಮಾನುಗಳನ್ನು ತಯಾರಿ ಮಾಡಲು ಹೇಳಿದ್ದರು ನಾವು ಅದರ ತಯಾರಿ ನಡೆಸುತ್ತಿದ್ದೇವೆ. ಎರಡು ಮೂರು ದಿನಗಳ ನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕ್ರ್(ರ) ಮತ್ತು ಹಝ್ರತ್ ಉಮರ್‌ರನ್ನು(ರ) ಕರೆದರು ಮತ್ತು ಹೀಗೆ ಹೇಳಿದರು: ಇಂತಿಂತಿಹ ಘಟನೆಯಾಗಿದೆ. ಈ ಘಟನೆಗಿಂತ ಮುಂಚಿತವಾಗಿ ನನಗೆ ಅಲ್ಲಾಹನು ತಿಳಿಸಿಕೊಟ್ಟಿದ್ದನು. ಮಕ್ಕಾ ನಿವಾಸಿಗಳು ಮೋಸಮಾಡಿರುವರು. ನಾವು ಅವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದೆವು. ಈಗ ನಾವು ಅವರನ್ನು ಹೆದರುವುದು ಮತ್ತು ಮಕ್ಕಾನಿವಾಸಿಗಳ ಧೈರ್ಯ ಮತ್ತು ಶಕ್ತಿಯನ್ನು ನೋಡಿ ಅವರನ್ನು ಎದುರಿಸಲು ತಯಾರಾಗದೇ ಇರುವುದು ಸತ್ಯವಿಶ್ವಾಸಕ್ಕೆ ವಿರುದ್ಧವಾದ ಸಂಗತಿಯಾಗಿದೆ. ನಾವು ಅಲ್ಲಿಗೆ ಹೋಗಬೇಕಾಗಿದೆ ಮತ್ತು ಇದರ ಬಗ್ಗೆ ನಿಮ್ಮಿಬ್ಬರ ಅಭಿಪ್ರಾಯವೇನು? ಹಝ್ರತ್ ಅಬೂಬಕರ್(ರ) ಹೇಳಿದರು: ನೀವಂತು ಅವರೊಡನೆ ಒಪ್ಪಂದ ಮಾಡಿಕೊಂಡಿರುವಿರಿ. ಮಾತ್ರವಲ್ಲ ಅದು ನಿಮ್ಮ ಸಮುದಾಯವಾಗಿದೆ. ಎಂದರೆ ನೀವು ನಿಮ್ಮ ಕೋಮನ್ನೇ ಕೊಲ್ಲುವಿರಾ? ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ನಮ್ಮ ಸಮುದಾಯವನ್ನು ಕೊಲ್ಲುವುದಿಲ್ಲ. ಒಪ್ಪಂದ ಮುರಿದವರನ್ನು ಕೊಲ್ಲುವೆವು. ಅನಂತರ ಹಝ್ರತ್ ಉಮರ್‌ರೊಡನೆ(ರ) ಅಭಿಪ್ರಾಯವನ್ನು ಕೇಳಿದರು. ಅವರು ಹೇಳಿದರು: ಬಿಸ್ಮಿಲ್ಲಾಹ್, ಅಲ್ಲಾಹನ ಹೆಸರಲ್ಲಿ, ಇಂತಹ ಒಂದು ದಿನ ಬರಲಿ ಎಂದು ನಾನಂತು ಬಹಳವಾಗಿ ಪ್ರಾರ್ಥಿಸುತ್ತಿದ್ದೆ. ನಾವು ಹಝ್ರತ್ ಪೈಗಂಬರರ(ಸ) ಸಂರಕ್ಷಣೆಗಾಗಿ ಸತ್ಯನಿಷೇಧಿಗಳೊಡನೆ ಯುದ್ಧ ಮಾಡುವೆವು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕ್ರ್ ಬಹಳ ಸೌಮ್ಯ ಸ್ವಭಾವದವರಾಗಿರುವರು. ಆದರೆ ಸತ್ಯ ಮತ್ತು ಸರಿಯಾದ ಮಾತುಗಳು ಹೆಚ್ಚಾಗಿ ಉಮರರ ನಾಲಗೆಯಿಂದಲೇ ಹೊರಡುತ್ತವೆ. ಆದ್ದರಿಂದ ಯುದ್ಧಕ್ಕಾಗಿ ತಯಾರಿ ಮಾಡಿರಿ. ಅನಂತರ ಆಸುಪಾಸಿನ ಗೋತ್ರಗಳಿಗೆ ಹೀಗೆ ತಿಳಿಸಲಾಯಿತು: ಅಲ್ಲಾಹನನ್ನು ಮತ್ತು ಪ್ರವಾದಿಯನ್ನು ನಂಬುವ ಪ್ರತಿಯೊಬ್ಬ ವ್ಯಕ್ತಿ ರಮಜಾನಿನ ಆರಂಭದ ದಿನಗಳಲ್ಲಿ ಮದೀನಕ್ಕೆ ಬಂದು ಸೇರಬೇಕು. ಹೀಗೆ ಸೈನ್ಯ ಒಟ್ಟುಗೂಡಲು ಶುರುವಾಯಿತು. ಅನೇಕ ಸಾವಿರಗಳ ಸೈನ್ಯ ತಯಾರಾಯಿತು. ಹೀಗೆ ಹಝ್ರತ್ ಪೈಗಂಬರ್(ಸ) ಯುದ್ಧಕ್ಕಾಗಿ ಹೊರಟರು.

(ಸೈರೆ ರೂಹಾನಿ(7), ಅನ್ವಾರುಲ್ ಉಲೂಮ್, ಸಂಪುಟ–24, ಪುಟ–260–261)

ಹಝ್ರತ್ ಅಬೂಬಕ್ರ್ ಮತ್ತು ಹಝ್ರತ್ ಉಮರರ(ರ) ಶ್ರೇಷ್ಠತೆಯ ಬಗ್ಗೆ ಹಝ್ರತ್ ಅಬೂಸಈದ್ ಖುದ್‌ರಿ ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಅತ್ಯಂತ ಮೇಲಿನ ಪದವಿಯ ಸ್ವರ್ಗವಾಸಿಗಳಲ್ಲಿ ಯಾರಾದರೊಬ್ಬರು ಸಾಮಾನ್ಯ ಸ್ವರ್ಗವಾಸಿಗಳು ಇರುವ ಸ್ಥಳವನ್ನು ಇಣುಕಿ ನೋಡಿದರೆ, ನಕ್ಷತ್ರದಂತೆ ಬೆಳಗುವ ಅವರ ಮುಖದ ಕಾರಣದಿಂದ ಸ್ವರ್ಗದ ಆ ಪ್ರದೇಶವು ಹೊಳೆಯುವುದು. ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಸಹ ಅವರಲ್ಲಿ ಒಬ್ಬರಾಗಿರುವರು. ಅವರಿಬ್ಬರೂ ಎಷ್ಟು ಚೆನ್ನ.

(ಸುನನ್ ಅಬೂದಾವೂದ್, ಕಿತಾಬುಲ್ ಹುರೂಫ್ ನಲ್ ಖಿರ್‌ಅತ್, ಹದೀಸ್–3987)

ಅಬೂಉಸ್ಮಾನ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅಮ್ರ್ ಬಿನ್ ಆಸ್‌ರನ್ನು ಧ್ವಾತುಸ್ಸಲಾಸಿಲಿನ ಸೈನ್ಯದ ಅಧಿಕಾರಿಯಾಗಿ ಕಳುಹಿಸಿದರು. ಹಝ್ರತ್ ಅಮ್ರ್ ಹೇಳುತ್ತಾರೆ: ನಾನು ಹಝ್ರತ್ ಪೈಗಂಬರರ(ಸ) ಬಳಿಗೆ ಮರಳಿ ಬಂದಾಗ ನಾನು ಅವರೊಡನೆ ಹೀಗೆ ಕೇಳಿದೆ: ಜನರಲ್ಲಿ ನಿಮಗೆ ಅತ್ಯಂತ ಪ್ರಿಯ ಯಾರು? ಪೈಗಂಬರ್(ಸ) ಹೇಳಿದರು: ಆಯಿಶ. ಪುರುಷರಲ್ಲಿ ನಿಮಗೆ ಅತ್ಯಂತ ಪ್ರಿಯರು ಯಾರು? ಪೈಗಂಬರ್(ಸ) ಹೇಳಿದರು: ಆಯಿಶರ ತಂದೆ. ಅನಂತರ ಯಾರೆಂದು ನಾನು ಕೇಳಿದೆ. ಉಮರ್ ಎಂದು ಪೈಗಂಬರ್(ಸ) ಹೇಳಿದರು. ಅನಂತರ ಅನೇಕ ಪುರುಷರ ಹೆಸರನ್ನು ಹೇಳಿದರು. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ....... ಹದೀಸ್–4358) (ಫರ್‌ಹಂಗ್ ಸೀರತ್, ಪುಟ–152, ಝುವಾರ ಅಕಾಡಮಿ ಕರಾಚಿ 2003)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಮುಹಾಜಿರ್ ಮತ್ತು ಅನ್ಸಾರ್ ಸಹಾಬರ ನಡುವೆ ಹಝ್ರತ್ ಪೈಗಂಬರ್(ಸ) ಕುಳಿತುಕೊಳ್ಳುತ್ತಿದ್ದರು. ಅವರಲ್ಲಿ ಇರುತ್ತಿದ್ದರು. ಅಬೂಬಕ್ರ್ ಮತ್ತು ಉಮರ್(ರ) ಹೊರತುಪಡಿಸಿ ಸಹಾಬರಲ್ಲಿ ಯಾರು ಹಝ್ರತ್ ಪೈಗಂಬರರನ್ನು(ಸ) ಕಣ್ಣೆತ್ತಿ ನೋಡುತ್ತಿರಲಿಲ್ಲ. ಆದರೆ ಅವರಿಬ್ಬರೂ ಹಝ್ರತ್ ಪೈಗಂಬರ್‌ರನ್ನು(ಸ) ನೋಡುತ್ತಿದ್ದರು ಮತ್ತು ಮುಗುಳ್ನಗುತ್ತಿದ್ದರು. ಅದೇ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ಅವರಿಬ್ಬರನ್ನೂ ನೋಡುತ್ತಿದ್ದರು ಮತ್ತು ಮುಗುಳ್ನಗುತ್ತಿದ್ದರು.
(ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3668)

ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕ್ರ್ ಮತ್ತು ಹಝ್ರತ್ ಉಮರ್(ರ) ಹೊರಟು ಮಸೀದಿಗೆ ಪ್ರವೇಶಿಸಿದರು. ಅವರಿಬ್ಬರಲ್ಲಿ ಒಬ್ಬರು ಹಝ್ರತ್ ಪೈಗಂಬರರ(ಸ) ಬಲಗಡೆ ಇದ್ದರು. ಮತ್ತೊಬ್ಬರು ಎಡಗಡೆ ಇದ್ದರು. ಪೈಗಂಬರ್(ಸ) ಅವರಿಬ್ಬರ ಕೈಗಳನ್ನು ಹಿಡಿದಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೀಗೆಯೇ ನಾವು ಖಿಯಾಮತ್ ದಿನದಂದು ಎಬ್ಬಿಸಲ್ಪಡುವೆವು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3669)

ಅಬ್ದುಲ್ಲಾಹ್ ಬಿನ್ ಹಂತಬ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕ್ರ್ ಮತ್ತು ಹಝ್ರತ್ ಉಮರ್‌ರನ್ನು ನೋಡಿ ಹೀಗೆ ಹೇಳಿದರು: ಇವರಿಬ್ಬರೂ ಕಿವಿ ಮತ್ತು ಕಣ್ಣಾಗಿರುವರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3671)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಃ ವರದಿ ಮಾಡುತ್ತಾರೆ – ಹಝ್ರತ್ ಉಮರ್(ರ) ಹಝ್ರತ್ ಅಬೂಬಕ್ರ್‌ರನ್ನು(ರ) ಸಂಬೋಧಿಸಿ ಹೇಳಿದರು: ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಅತ್ಯಂತ ಶ್ರೇಷ್ಠ ಮನುಷ್ಯಾ! ಆಗ ಹಝ್ರತ್ ಅಬೂಬಕ್ರ್(ರ) ಹೇಳಿದರು: ನೀವು ಹಾಗೆ ಹೇಳುವುದಾದರೆ ಕೇಳಿರಿ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಉಮರ್‌ಗಿಂತ ಉತ್ತಮ ವ್ಯಕ್ತಿಯ ಮೇಲೆ ಸೂರ್ಯನು ಉದಯಿಸಿಲ್ಲ. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3684)

ಹಝ್ರತ್ ಇಬ್ನು ಉಮರ್ ವರದಿ ಮಾಡುತ್ತಾರೆ: ಮೊತ್ತಮೊದಲು ನನ್ನನ್ನು ಖಬರಿನಿಂದ ಎಬ್ಬಿಸಲಾಗುವುದು, ಅನಂತರ ಅಬೂಬಕ್ರ್, ಅನಂತರ ಉಮರ್, ಅನಂತರ ನಾನು ಬಖೀ ವಾಸಿಗಳ ಬಳಿಗೆ ಬರುವೆನು. ಆಗ ಅವರು ನನ್ನೊಂದಿಗೆ ಎಬ್ಬಿಸಲ್ಪಡುವರು. ಅನಂತರ ನಾನು ಮಕ್ಕಾ ನಿವಾಸಿಗಳಿಗಾಗಿ ಕಾಯುವೆನು. ಅನಂತರ ಹರಮೈನಿನ ನಡುವಿನಿಂದ ಎಬ್ಬಿಸಲ್ಪಡುವೆನು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3692)

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಬಳಿಗೆ ಸ್ವರ್ಗವಾಸಿಗಳಲ್ಲಿ ಒಬ್ಬರು ಬರುತ್ತಿದ್ದಾರೆ. ಆಗ ಹಝ್ರತ್ ಅಬೂಬಕ್ರ್(ರ) ಬಂದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಬಳಿಗೆ ಸ್ವರ್ಗವಾಸಿಗಳಲ್ಲಿ ಒಬ್ಬರು ಬರುತ್ತಿದ್ದಾರೆ. ಆಗ ಹಝ್ರತ್ ಉಮರ್(ರ) ಬಂದರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3694)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ –ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರರ(ರ) ಕುರಿತು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅಬೂಬಕ್ರ್ ಮತ್ತು ಉಮರ್ ಆರಂಭ ಮತ್ತು ಕೊನೆಯ ಎಲ್ಲ ಹಿರಿಯರ ಸರದಾರರಾಗಿರುವರು. ಪ್ರವಾದಿಗಳನ್ನು ಹೊರತುಪಡಿಸಿ ಇತರ ಎಲ್ಲರ ನೇತಾರರಾಗಿರುವರು. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹುದೈಫ ವರದಿ ಮಾಡುತ್ತಾರೆ: ನನ್ನ ನಂತರ ಅವರಿಬ್ಬರನ್ನು ಎಂದರೆ ಅಬೂಬಕ್ರ್ ಮತ್ತು ಉಮರ್‌ರನ್ನು ಅನುಸರಿಸಿರಿ. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3664)

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಬೂಸಈದ್ ಖುದ್‌ರಿ ವರದಿ ಮಾಡುತ್ತಾರೆ: ಪ್ರತಿಯೊಬ್ಬ ಪ್ರವಾದಿಯ ಬಳಿ ಆಕಾಶದವರಲ್ಲಿ ಎರಡು ಕಾರ್ಯನಿರ್ವಾಹಕರು ಇರುತ್ತಾರೆ. ಅದೇ ರೀತಿಯಲ್ಲಿ ಭೂಮಿಯ ನಿವಾಸಿಗಳಲ್ಲಿ ಇಬ್ಬರು ಕಾರ್ಯದರ್ಶಿಗಳು ಇರುತ್ತಾರೆ. ಆಕಾಶದವರಲ್ಲಿ ನನ್ನ ಎರಡು ಕಾರ್ಯದರ್ಶಿಗಳು ಜಿಬ್ರೀಲ್ ಮತ್ತು ಮೀಕಾಯಿಲ್ ಆಗಿರುವರು ಹಾಗೂ ಭೂಮಿಯವರಲ್ಲಿ ನನ್ನ ಇಬ್ಬರು ಕಾರ್ಯದರ್ಶಿಗಳು ಅಬೂಬಕ್ರ್ ಮತ್ತು ಉಮರ್ ಆಗಿರುವರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3662)

ಹಝ್ರತ್ ಹುದೈಫ ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರ್‌ರ(ರ) ಬಳಿಯಲ್ಲಿ ಕುಳಿತುಕೊಂಡಿದ್ದೆವು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನಿಮ್ಮೊಂದಿಗೆ ಎಷ್ಟು ಕಾಲವಿರುವೆನು ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ನೀವಿಬ್ಬರೂ ನನ್ನ ನಂತರ ಇರುವ ಇಬ್ಬರನ್ನು ಅನುಸರಿಸಿರಿ. ಹೀಗೆ ಹೇಳುತ್ತಾ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕ್ರ್ ಮತ್ತು ಹಝ್ರತ್ ಉಮರ್‌ರ ಕಡೆಗೆ ಬೊಟ್ಟು ಮಾಡಿದರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3680)

ಹಝ್ರತ್ ಅಬೂಬುಕ್ರ ವರದಿ ಮಾಡುತ್ತಾರೆ: ನಿಮ್ಮಲ್ಲಿ ಯಾರು ಕನಸ್ಸನ್ನು ಕಂಡಿದ್ದೀರಿ ಎಂದು ಒಂದು ದಿನ ಹಝ್ರತ್ ಪೈಗಂಬರ್(ಸ)

ಕೇಳಿದರು. ಆಗ ಒಬ್ಬ ವ್ಯಕ್ತಿ ಹೇಳಿದರು: ನಾನು ಹೀಗೆ ಕನಸ್ಸನ್ನು ಕಂಡಿದ್ದೇನೆ. ಒಂದು ತಕ್ಕಡಿಯನ್ನು ಆಕಾಶದಿಂದ ಇಳಿಸಲಾಗಿತ್ತು. ಹಝ್ರತ್ ಪೈಗಂಬರ್‌ರನ್ನು(ಸ) ಮತ್ತು ಹಝ್ರತ್ ಅಬೂಬಕ್ರ್‌ರನ್ನು(ರ) ಅದರಲ್ಲಿ ತೂಗಿಸಲಾಯಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕ್ರ್‌ಗಿಂತ(ರ) ಭಾರವುಳ್ಳವರಾಗಿದ್ದರು. ಅನಂತರ ಹಝ್ರತ್ ಅಬೂಬಕ್ರ್(ರ) ಮತ್ತು ಹಝ್ರತ್ ಉಮರ್‌ರನ್ನು(ರ) ತಕ್ಕಡಿಯಲ್ಲಿ ತೂಗಿಸಲಾಯಿತು. ಆಗ ಅಬೂಬಕ್ರ್(ರ) ಹೆಚ್ಚು ತೂಗಿದರು. ಅನಂತರ ಹಝ್ರತ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್‌ರನ್ನು(ರ) ತೂಗಿಸಲಾಯಿತು. ಆಗ ಹಝ್ರತ್ ಉಮರ್‌ರಿಗೆ(ರ) ಹೆಚ್ಚು ತೂಕವಿತ್ತು. ಅನಂತರ ತಕ್ಕಡಿಯನ್ನು ಮೇಲಕ್ಕೆ ಎತ್ತಲಾಯಿತು. ವರದಿಗಾರ ಹೇಳುತ್ತಾರೆ: ನಾನು ಹಝ್ರತ್ ಪೈಗಂಬರರ(ಸ) ಮುಖದಲ್ಲಿ ಅನಿಷ್ಟತೆಯ ಲಕ್ಷಣಗಳನ್ನು ಕಂಡೆನು.

ಮತ್ತೊಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಪ್ರಸ್ತಾಪಿಸಲಾಗಿದೆ: ಇದು ನುಬುವ್ವತ್ತಿನ ಖಿಲಾಫತ್ ಆಗಿದೆ. ಅನಂತರ ಅಲ್ಲಾಹನು ಇಚ್ಛಿಸುವವರಿಗೆ ಅರಸುತನ ಮತ್ತು ಆಧಿಪತ್ಯ ನೀಡುವನು.

ಅಬ್ದು ಖೈರ್ ವರದಿ ಮಾಡುತ್ತಾರೆ: ಹಝ್ರತ್ ಅಲಿ(ರ) ಮಿಂಬರ್, ಪ್ರವಚನ ಪೀಠದಲ್ಲಿ ನಿಂತು ಹೀಗೆ ಹೇಳಿದರು: ಎಲ್ಲೈ ಜನರೇ, ಹಝ್ರತ್ ಪೈಗಂಬರರ(ಸ) ನಂತರ ಈ ಸಮುದಾಯದಲ್ಲಿರುವ ಅತ್ಯುತ್ತಮ ವ್ಯಕ್ತಿಯ ಬಗ್ಗೆ ನಾನು ಹೇಳಲೇ? ಹೇಳಿಕೊಡಿರಿ ಎಂದು ಜನರು ಹೇಳಿದರು. ಅವರು ಅಬೂಬಕ್ರ್(ರ) ಎಂದು ಹಝ್ರತ್ ಅಲಿ(ರ) ಹೇಳಿಕೊಟ್ಟರು. ಅನಂತರ ಹಝ್ರತ್ ಅಲಿ(ರ) ಸ್ವಲ್ಪ ಸಮಯ ಸುಮ್ಮನಾಗಿದ್ದ ನಂತರ ಹೀಗೆ ಹೇಳಿದರು: ಎಲ್ಲೈ ಜನರೇ, ಹಝ್ರತ್ ಅಬೂಬಕ್ರ್‌ರ(ಸ) ನಂತರ ಈ ಸಮುದಾಯದಲ್ಲಿರುವ ಅತ್ಯುತ್ತಮ ವ್ಯಕ್ತಿಯ ಬಗ್ಗೆ ಹೇಳಲೇ? ಅವರು ಉಮರ್(ರ) ಆಗಿರುವರು. (ಹುಲ್‌ಯತುಲ್ ಔಲಿಯಾ, ಇಮಾಮ್ ಅಸ್‌ಫಹಾನ, ಸಂಪುಟ–7, ಪುಟ–205, ಹದೀಸ್–10323, ಮಕ್‌ತಬ ಈಮಾನ್ ಮನ್‌ಸೂರ 2007)

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್. ಈಗ ನಾನು ಜುಮಾ ನಮಾಝ್ ನಂತರ ಕೆಲವು ದಿವಂಗತರ ಜನಾಝ ನಮಾಝನ್ನು ನಿರ್ವಹಿಸುವೆನು. ಅವರ ಬಗ್ಗೆಗಿನ ಪ್ರಸ್ತಾಪ ಈಗ ಮಾಡುತ್ತೇನೆ.

ಮೊದಲ ಪ್ರಸ್ತಾಪ ಪಿಶಾವರದ ಸನ್ಮಾನ್ಯ ನಸೀರ್ ಅಹ್ಮದ್ ಸಾಹಿಬ್‌ರ ಮಗನಾದ ಸನ್ಮಾನ್ಯ ಕಾಮ್‌ರಾನ್ ಅಹ್ಮದ್ ಸಾಹಿಬ್ ಶಹೀದ್‌ರದ್ದಾಗಿದೆ. ಅವರನ್ನು ನವೆಂಬರ್ 9ರಂದು ವಿರೋಧಿಗಳು ಅವರನ್ನು ಅವರ ಆಫೀಸ್‌ನಲ್ಲಿ ಗುಂಡುಹಾರಿಸಿ ಶಹೀದ್ ಮಾಡಿದರು. ಇನ್ನಾ **ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಶಹೀದ್‌ರ ವಯಸ್ಸು 44 ಆಗಿತ್ತು. ಪಿಶಾವರದ ಒಬ್ಬ ಅಹ್ಮದಿಯಾದ ಸನ್ಮಾನ್ಯ ಶಫೀಖುರ್ರಹ್ಮಾನ್ ಸಾಹಿಬ್‌ರ ಫ್ಯಾಕ್ಟರಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಬಂದೂಕುಧಾರಿಯಾದ ಒಬ್ಬ ವ್ಯಕ್ತಿ ಬಂದು ಗುಂಡು ಹಾರಿಸಿದನು. ಕಾಮ್‌ರಾನ್ ಸಾಹಿಬ್‌ರಿಗೆ 4 ಗುಂಡುಗಳು ತಗುಲಿದುವು ಮತ್ತು ಸ್ಥಳದಲ್ಲೇ ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಘಟನೆ ನಡೆದ ನಂತರ ಹಂತಕ ಪರಾರಿಯಾದನು. ದಿವಂಗತ ಶಹೀದ್‌ರ ಕುಟುಂಬದಲ್ಲಿ ಅವರ ತಂದೆಯಾದ ಸನ್ಮಾನ್ಯ ನಸೀರ್ ಅಹ್ಮದ್ ಸಾಹಿಬ್‌ರ ತಾತರಾದ ನಬಿ ಬಕ್ಷ್ ಸಾಹಿಬ್‌ರ ಮೂಲಕ ಪ್ರವೇಶಿಸಿತ್ತು. ನಬಿ ಬಕ್ಷ್ ಸಾಹಿಬ್‌ರು ಖಾದಿಯಾನಿನ ಸಮೀಪದ ಪ್ರದೇಶವಾದ ಭೀನೀಬಾಂಗಡಿನ ಫತಹ್‌ದೀನ್ ಸಾಹಿಬ್‌ರ ಮಗನಾಗಿದ್ದರು. ನಬಿ ಬಕ್ಷ್ ಸಾಹಿಬ್‌ರು 1902ರಲ್ಲಿ ಹಝ್ರತ್ ಮಸೀಹ್ ಮೌಊದ್‌ರ(ಅ) ಅನುಗ್ರಹೀತ ಕೈಗಳಲ್ಲಿ ಬೈಅತ್ ಮಾಡಿ ಅಹ್ಮದಿಯ್ಯತಿಗೆ ಪ್ರವೇಶಿಸಿದ್ದರು. ಶಹೀದ್ ಆದ ಕಾಮ್‌ರಾನ್ ಸಾಹಿಬ್‌ರು ಕೆಲವು ಕಾಲಗಳ ಹಿಂದೆ ಒಂದು ಅಂಗಡಿಯನ್ನು ಬಾಡಿಗೆಗೆ ತೆಗೆದು ತನ್ನ ಸಹೋದರನೊಂದಿಗೆ ಒಂದು ಆಫೀಸ್ ಮಾಡಿದ್ದರು. ಇವರು ಅಹ್ಮದಿಯಾಗಿರುವ ಕಾರಣದಿಂದ ಮಾತ್ರ ಅಂಗಡಿಯ ಮಾಲಿಕನು ಒಂದು ದಿನದ ನೋಟೀಸ್ ಕೊಟ್ಟು ಅಂಗಡಿಯನ್ನು ಖಾಲಿ ಮಾಡಿಸಿದನು. ಅನಂತರ ಆ ಬೀದಿಗೆ ಖತಮುನ್ನುಬುವ್ವತ್ ಚೌಕ್ ಎಂದು ಹೆಸರಿಸಲಾಯಿತು. ಅದರ ಸಮೀಪವೇ ಬೇರೊಂದು ಅಂಗಡಿಯನ್ನು ಬಾಡಿಗೆಗೆ ತೆಗೆದಾಗ, ಎದುರಾಳಿಗಳು ಮೆರವಣಿಗೆ ನಡೆಸಿ ಅದನ್ನು ಕೂಡ ಖಾಲಿ ಮಾಡಿಸಿದರು. ಶಹೀದ್‌ರ ಮನೆಯ ಸಮೀಪ ಅಕ್ಟೋಬರ್‌ನಲ್ಲಿ ದೊಡ್ಡ ಸಮ್ಮೇಳನವನ್ನು ನಡೆಸಿ ಜಮಾಅತಿನ ವಿರುದ್ಧ ತೀವ್ರ ಪ್ರಚೋದನಕಾರಿ ಭಾಷಣಗಳನ್ನು ಮಾಡಿದರು. ಆ ಪ್ರದೇಶದಲ್ಲಿ ಅಷ್ಟು ದೊಡ್ಡ ಸಮ್ಮೇಳನ ಹಿಂದೆಂದೂ ನಡೆದಿರಲಿಲ್ಲ. ಆ ಪ್ರದೇಶದಲ್ಲಿ ತೀವ್ರ ಹಗೆಯ ವಾತಾವರಣ ಸೃಷ್ಟಿಯಾಯಿತು. ಶಹೀದ್‌ರು ಹಲವು ವರ್ಷಗಳಿಂದ ಒಂದು ಪ್ರೈವಟ್ ಸಂಸ್ಥೆಯಲ್ಲಿ ಅಕೌಂಟೆಂಟ್ ಸಹ ಆಗಿದ್ದರು. ವಿರೋಧದ ಕಾರಣದಿಂದ ಅಲ್ಲಿಂದ ನಿವೃತ್ತಿ ಪಡೆದುಕೊಂಡರು. ಸಂಸ್ಥೆಯವರು ಹೇಳಿದರು: ನಿಮ್ಮ ವರ್ತನೆ ಮತ್ತು ಪ್ರಾಮಾಣಿಕತೆಯ ಕಾರಣದಿಂದ ನಮಗೆ ನಿಮ್ಮನ್ನು ಬಿಡಲು ಸಾಧ್ಯವಿಲ್ಲ. ಕೆಲವು ನಿಮಿಷಗಳಿಗಾದರೂ ನೀವು ನಮ್ಮ ಬಳಿಗೆ ಬರಬೇಕು. ಅವರು ಶಹೀದ್ ಆದಾಗ ಸಂಸ್ಥೆಯವರು ಬಹಳ ದುಃಖಿತರಾಗಿದ್ದರು. ಶಹೀದ್‌ರು ಅನೇಕ ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಅವರ ತಂದೆ ಹೇಳುತ್ತಾರೆ: ರಾತ್ರಿ ಸಮಯದಲ್ಲಿ ಅವರು ತಡವಾಗಿ ಮನೆಗೆ ಬಂದಾಗ, ಬಹಳ ತಡವಾಗಿ ಮನೆಗೆ ಮುಟ್ಟಲು ಕಾರಣವೇನೆಂದು ಕೇಳಿದೆ. ಅಹ್ಮದಿಯ್ಯತ್ತಿನ ವಿರೋಧಿಯಾಗಿರುವ ಒಂದು ಕುಟುಂಬದ ಮಹಿಳೆಯೊಬ್ಬಳಿಗೆ ರಕ್ತದ ಆವಶ್ಯಕತೆಯಿತ್ತು. ಅವರು ಆರ್ಥಿಕವಾಗಿ ದುರ್ಬಲರು ಆದ್ದರಿಂದ ರಕ್ತವನ್ನು ಕೊಟ್ಟೆನು. ಅವರಿಗೆ ಅವರ ನಡೆವಳಿಕೆ ಕ್ರಮ ಮತ್ತು ನಮಗೆ ನಮ್ಮ ನಡೆವಳಿಕೆ ಕ್ರಮ. ಸದಾ ಸೇವೆಯಲ್ಲಿ ಮುಂದಿದ್ದರು. ಜಮಾಅತಿನ ಸೇವೆ ಮತ್ತು ಡ್ಯೂಟಿಗಾಗಿ ಎಲ್ಲರಿಗಿಂತ ಮುಂದೆ ಇರುತ್ತಿದ್ದರು. ಯಾವಾಗಲೂ ಸ್ವತಃ ಅಪಾಯಕಾರಿ ಪ್ರದೇಶದಲ್ಲಿ ಡ್ಯೂಟಿ ನೀಡುತ್ತಿದ್ದರು. ಹಿಜ್ರತ್ ಮಾಡಲು ಅವರಿಗೆ ಸಲಹೆ ನೀಡಲಾಗುವಾಗ, ಅವರು ಹೀಗೆ ಹೇಳುತ್ತಿದ್ದರು: ನಾವು ಇಲ್ಲಿಂದ ಹೊರಟು ಹೋದರೆ ದುರ್ಬಲ ಅಹ್ಮದಿಯರ ಸಮಸ್ಯೆಗಳು ಇನ್ನೂ ವರ್ಧಿಸುವುವು. ಚಂದಾಗಳ ಪಾವತಿಯಲ್ಲಿ ಅವರು ಬಹಳ ಮುಂದಿದ್ದರು. ಸದಾ ತಹ್ರೀಕ್ ಜದೀದ್ ಚಂದಾವನ್ನು ಪಾವತಿ ಮಾಡಬೇಕಾದ ಆರಂಭದ ದಿನಗಳಲ್ಲೇ ಸಂದಾಯ ಮಾಡುತ್ತಿದ್ದರು. ಹನ್ನೆರಡು ಹದಿಮೂರು ಪ್ರಾಯವಿದ್ದಾಗ ಒಂದು ಬಾರಿ ಮುಬಾಹಲ ಪಂಥಾಹ್ವಾನದ ನೋಟೀಸ್ ವಿತರಣೆ ಮಾಡುತ್ತಿದ್ದ ಕಾರಣದಿಂದ ಪೋಲಿಸ್ ಅವರನ್ನು ಹಿಡಿದು ಜೈಲಿಗೂ ಹಾಕಿದ್ದರು. ಮರುದಿನ ಅವರನ್ನು ಬಿಡುಗಡೆಗೊಳಿಸಿದ್ದರು. ಶಹಾದತಿನ ಘಟನೆ ನಡೆಯುದ್ದಕ್ಕೆ ಎರಡು ದಿನಗಳಿಗೆ ಮುಂಚೆ ಅವರೊಂದು ಕನಸನ್ನು ಕಂಡಿದ್ದರು. ಅದು ಹೀಗಿದೆ: ಒಂದು ಮುದಿವಯಸ್ಸಿನ ಮಹಿಳೆ ಅವರ ಮನೆಯನ್ನು ಶುಚಿಗೊಳಿಸುತ್ತಿದ್ದರು. ಖಲೀಫತುಲ್ ಮಸೀಹ್ ರಾಬಿಅ್ ಬರುವರು ಎಂದು ಮಹಿಳೆ ಹೇಳುತ್ತಿದ್ದರು. ಸ್ವಲ್ಪ ಸಮಯದ ನಂತರ ಹಝ್ರತ್ ರಾಬಿಅ್(ರ) ಬಂದರು. ಸನ್ಮಾನ್ಯ ಶಹೀದ್‌ರ ಕೈಯನ್ನು ಹಿಡಿದರು ಮತ್ತು ನಾವು ಒಟ್ಟಿಗೆ ಇರೋಣ. ನೀವು ನನ್ನ ಜೊತೆಗೇ ಇರಬೇಕು. ದಿವಂಗತರು ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದರು. ಸೌಮ್ಯ ಸ್ವಭಾವದ ಸ್ನೇಹಮಯಿ ವ್ಯಕ್ತಿತ್ವವನ್ನು ಹೊಂದಿದ್ದರು. ಸಭ್ಯ, ಬಡವರ ಬಗ್ಗೆ ಸಹಾನುಭೂತಿ ಹೊಂದಿದ್ದ, ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿಯನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ತಂದೆ ತಾಯಿ, ಪತ್ನಿ ಮತ್ತು 13, 11, 8 ವಯಸ್ಸಿನ ಮೂವರು ಮಕ್ಕಳನ್ನು ದಿವಂಗತರು ಅಗಲಿರುವರು. ಅಲ್ಲಾಹನು ಈ ಮಕ್ಕಳ ಕೂಡ ಸಂರಕ್ಷಕನಾಗಲಿ, ಎಲ್ಲರಿಗೂ ಧೈರ್ಯ ಮತ್ತು ಸಹನೆಯನ್ನು ದಯಪಾಲಿಸಲಿ, ದಿವಂಗತರೊಂದಿಗೆ ಸಹ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಪದವಿಗಳನ್ನು ಉನ್ನತಗೊಳಿಸಲಿ. ಅವರ ತಾಯಿ ಕ್ಯಾನ್ಸರ್ ರೋಗದಿಂದ ಪೀಡಿತರಾಗಿರವರು. ಅಲ್ಲಾಹನು ಅವರ ಮೇಲೆ ಕೃಪೆದೋರಲಿ.

ಎರಡನೇ ಜನಾಝ ಡಾಕ್ಟರ್ ಮಿರ್ಝಾ ನಬೀರ್ ಅಹ್ಮದ್ ಮತ್ತು ಅವರ ಪತ್ನಿಯಾದ ಆಯಿಶ ಅಂಬರ್ ಸಯ್ಯದ್‌ರದ್ದಾಗಿದೆ. ಇಬ್ಬರೂ ಅಮೇರಿಕದ ಮಲ್‌ವಾದ ಉಂಟಾದ ರಸ್ತೆ ಅಪಘಾತದಲ್ಲಿ ಮೃತರಾದರು. ಡಾಕ್ಟರ್ ಮಿರ್ಝಾ ನಬೀರ್ ಅಹ್ಮದ್‌ರ ವಯಸ್ಸು 35 ಆಗಿತ್ತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರ ತಾತರ ತಂದೆಯಾದ ಹಝ್ರತ್ ಡಿಪ್ಟಿ ಮಿಯಾ ಮುಹಮ್ಮದ್ ಶರೀಫ್ ಸಾಹಿಬ್‌ರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾಗಿದ್ದರು. ದಿವಂಗತರ ಅಜ್ಜಿಯು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಮಾಸ್ಟರ್ ಅಬ್ದುರ್ರಹ್ಮಾನ್‌ರ(ರ) ಮಗಳಾಗಿದ್ದರು. ಅವರ ಕುಟುಂಬದಲ್ಲಿ ಅನೇಕರು ಸಹಾಬರು ಆಗಿರುವರು. ದಿವಂಗತರು 2012ರಲ್ಲಿ ಅಮೇರಿಕಾಗೆ ಹೋದರು. 17 ನೇ ವಯಸ್ಸಿನಲ್ಲಿ ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗಿಯಾಗಲು ಸೌಭಾಗ್ಯ ಲಭಿಸಿತ್ತು. ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾದ ಖಾಇದ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದರು. ಮಲ್‌ವದಲ್ಲಿ ಮಸೀದಿಗಾಗಿ ಒಂದು ಹೊಸ ಕಟ್ಟಡವನ್ನು ಖರೀದಿ ಮಾಡಲಿಕ್ಕಾಗಿ ಲೋಕಲ್ ಜಮಾಅತಿನಿಂದ ಮೊತ್ತಮೊದಲು ದೇಣಿಗೆಯನ್ನು ನೀಡಿದವರಲ್ಲಿ ದಿವಂಗತರು ಕೂಡ ಇದ್ದರು. ದಿವಂಗತರು ತಂದೆಯಾದ ಮಿರ್ಝಾ ನಸೀರ್ ಅಹ್ಮದ್ ಸಾಹಿಬ್‌ರನ್ನು (ಸೆಕ್ರಟರಿ ಉಮೂರೇ ಆಮ್ಮ ಇಸ್ಲಾಮಾಬಾದ್), ತಾಯಿಯನ್ನು (ರೀಜನಲ್ ಸದರ್ ಇಸ್ಲಾಮಾಬಾದ್), ಸಹೋದರಿ ಮತ್ತು ಸಹೋದರನನ್ನು ಅಗಲಿರುವರು. ಅವರೊಂದಿಗೆ ಅಪಘಾತದಲ್ಲಿ ನಿಧನರಾದ ಅವರ ಪತ್ನಿ ಆಯಿಶ ಅಂಬರ್ ಎಂಬವರು ಜಾಪಾನಿನ ಸಯ್ಯದ್ ಶುಜಾಅತ್ ಅಹ್ಮದ್ ಸಾಹಿಬ್‌ರ ಮಗಳಾಗಿದ್ದರು. ಜಾಪಾನಿನಲ್ಲಿ ಈಗ ಮುರಬ್ಬಿಯಾಗಿರುವ ಸಯ್ಯದ್ ಇಬ್ರಾಹೀಂ ಸಾಹಿಬ್‌ರ

ಸಹೋದರಿಯಾಗಿದ್ದರು. ಫಗ್‌ಲದ ಸಯ್ಯದ್ ಅಬ್ದುರ್ರಹೀಂ ಶಾಹ್ ಸಾಹಿಬ್‌ರ ಮೂಲಕ 1930ರಲ್ಲಿ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಅವರು ಹಝ್ರತ್ ಮುಸ್ಲಿಹ್ ಮೌಊದ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. ನಾನು ಹೇಳಿದಂತೆ ಇವರು ಸಹ ಅಪಘಾತದ ನಡೆದ ಎರಡು ದಿನದ ನಂತರ ಮೃತಪಟ್ಟರು. ದಿವಂಗತರು ಎಂ.ಟಿ.ಎ.ಇಂಟರ್‌ನ್ಯಾಶನಲಿನ ಕ್ರಿಯಾಶೀಲ ಮೆಂಬರ್ ಆಗಿದ್ದರು. ನನ್ನ ಖುತ್ಬವನ್ನು ಜಾಪಾನಿ ಭಾಷೆಯಲ್ಲಿ ಲೈವ್ ತರ್ಜುಮೆ ಕೂಡ ಮಾಡುತ್ತಿದ್ದರು ಮತ್ತು ಜಾಪಾನಿ ಭಾಷೆಯಲ್ಲಿ ಸಬ್ ಟೈಟಲಿಂಗ್ ಸಹ ಮಾಡುತ್ತಿದ್ದರು. ದಿವಂಗತರು ತಂದೆಯಾದ ಸಯ್ಯದ್ ಸುಜ್ಜಾದ್ ಅಹ್ಮದ್‌ರನ್ನು, ತಾಯಿಯಾದ ಸಯ್ಯದ ದುರ್‍ರೇಸಮೀನ್‌ರನ್ನು, ಮೂವರು ಸಹೋದರರನ್ನು ಮತ್ತು ಒಬ್ಬಳು ಸಹೋದರಿಯನ್ನು ಅಗಲಿರುವರು. ಜಾಪಾನಿನಲ್ಲಿ ಮುಬಲ್ಲಿಗ್ ಆಗಿ ಸೇವೆ ಮಾಡುತ್ತಿರುವ ಅವರ ಸಹೋದರನಾದ ಇಬ್ರಾಹೀಂ ಸಾಹಿಬ್‌ರು ಹೇಳುತ್ತಾರೆ: ಜಮಾಅತಿನ ಅನೇಕ ಕೆಲಸಗಳಲ್ಲಿ ನನಗೆ ನೆರವಾಗುತ್ತಿದ್ದರು. ಲೇಕ್ಚರ್ ಲಾಹೋರ್ ಮತ್ತು ಹಮಾರ ಖುದಾದ ಜಾಪಾನಿ ತರ್ಜುಮೆಯಲ್ಲಿ ನನ್ನ ಸಹಾಯಕಿಯಾಗಿದ್ದರು. ಎಷ್ಟು ಉತ್ತಮವಾಗಿ ತರ್ಜುಮೆ ಮಾಡುತ್ತಿದ್ದರು ಎಂದರೆ, ಫಾರ್ಮಸಿಯಲ್ಲಿ ಡಿಗ್ರಿ ಮಾಡಿರುವ ಸಹೋದರಿಯು ಹೇಗೆ ಇಷ್ಟು ಉತ್ತಮ ತರ್ಜುಮೆ ಹೇಗೆ ಮಾಡುತ್ತಿರುವಳು ಎಂದು ನಾನು ಅಚ್ಚರಿಪಡುತ್ತಿದ್ದೆ. ದಿವಂಗತರ ಹಿರಿಯ ಸಹೋದರಿಯಾದ ಫಾತಿಮಾ ಹೇಳುತ್ತಾರೆ: ಅವರ ಒಂದು ಡೈರಿ ನನ್ನ ಬಳಿಯಿದೆ. ಪ್ರತಿ ಪುಟ ಎರಡು ವಿಷಯಗಳನ್ನು ಹೊಂದಿತ್ತು. ಒಂದರಲ್ಲಿ ನನ್ನ ಭೌತಿಕ ಜೀವನವೆಂದೂ ಮತ್ತೊಂದರಲ್ಲಿ ನನ್ನ ಆಧ್ಯಾತ್ಮಿಕ ಜೀವನವೆಂದೂ ಬರೆದಿದ್ದರು. ಲೌಕಿಕ ಜೀವನವೆಂಬ ಭಾಗದಲ್ಲಿ ದಿನನಿತ್ಯದ ಕೆಲಸಗಳನ್ನು ಮತ್ತು ಲೌಕಿಕ ಉದ್ದೇಶಗಳನ್ನು ಬರೆಯಲಾಗಿತ್ತು. ಆಧ್ಯಾತ್ಮಿಕ ಜೀವನವೆಂಬ ಭಾಗವನ್ನುಜಮಾಅತಿನ ನೋಟಿಸ್ ಮತ್ತು ಧಾರ್ಮಿಕ ಅರಿವಿಗಾಗಿ ಇರಿಸಲಾಗಿತ್ತು. ಪ್ರತಿ ಪುಟವನ್ನು ಬಹಳ ಸುಂದರವಾಗಿ ಮತ್ತು ಚಿಂತಿಸಿ ಬರೆಯಲಾಗಿತ್ತು. ಖಲೀಫತುಲ್ ಮಸೀಹ್‌ರ ಪ್ರತಿಯೊಂದು ಪದವನ್ನು ಬಹಳ ಗಮನವಿಟ್ಟು ಆಲಿಸುವುದು, ಅದರ ಪ್ರಕಾರ ನಡೆಯುವುದು ಮತ್ತು ತನ್ನ ಸಹೋದರ ಸಹೋದರಿಯರಿಗೆ ಅದನ್ನು ಹೇಳಿಕೊಡುವುದು ಅವರ ವಿಶಿಷ್ಟ ರೀತಿಯಾಗಿತ್ತು. ಜಾಪಾನಿನ ಸಹೋದರಿಯರಿಗೂ ಇಸ್ಲಾಮಿನ ಯುಕ್ತಿಪೂರ್ಣವಾದ ಪಾಠವನ್ನು ಹೇಳಿಕೊಡುತ್ತಿದ್ದರು. ಅಲ್ಲಾಹನು ಇಬ್ಬರು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಕರಾಚಿಯ ಕ್ಲಿಫ್‌ಟನ್ ಜಮಾಅತಿನಲ್ಲಿ ಸೆಕ್ರೆಟರಿ ಮಾಲ್ ಆಗಿದ್ದ ಚೌಧರಿ ನಸೀರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಇವರು ರಬ್ವದ ನಝೀರ್ ಅಹ್ಮದ್ ಸಾಹಿಬ್‌ರ ಮಗನಾಗಿದ್ದರು. 69ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ತನ್ನ ಪತ್ನಿ ಮತ್ತು ಅಳಿಯನೊಂದಿಗೆ ಫಜ್ರ್ ನಮಾಝಿಗೆ ಇಮಾಮತ್ ವಹಿಸುತ್ತಿದ್ದರು. ಎರಡನೇ ರಕಅತಿನಲ್ಲಿ ಸಜ್ದ ಮಾಡುತ್ತಿದ್ದಾಗ ಅಚಾನಕ್ಕಾಗಿ ಹೃದಯಘಾತ ಉಂಟಾಗಿ ನಿಧನರಾದರು. ದಿವಂಗತರು ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ನಮಾಝ್ ಮಾಡುತ್ತಿರುವ ಸ್ಥಿತಿಯಲ್ಲಿ ಮೃತ್ಯು ಬರುವುದನ್ನು ಶ್ರೇಷ್ಠ ಮೃತ್ಯುವೆಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು. ದಿವಂಗತರ ತಂದೆಯಾದ ಚೌಧರಿ ನಝೀರ್ ಅಹ್ಮದ್‌ರಿಗೂ ರಿಟಾಯರ್‌ಮೆಂಟಿನ ನಂತರ 25 ವರ್ಷಗಳ ಕಾಲ ಜಮಾಅತಿನ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅವರು ನಾಇಬ್ ನಾಝಿರ್ ಝಿಯಾಅತ್ ಮತ್ತು ವಕೀಲ್ ಝಿರಾಅತ್ ಆಗಿದ್ದರು. ಅವರ ಕಿರಿಯ ಸಹೋದರನಾಧ ಚೌಧರಿ ನಈಂ ಅಹ್ಮದ್ ಸಾಹಿಬ್‌ರು ಈಗ ಅಂಜುಮನನ ಖಜಾನೆ ಆಫೀಸರ್ ಆಗಿರುವರು. ದಿವಂಗತರು ಪತ್ನಿಯಾದ ನುಸ್ರತ್ ನಸೀರ್ ಸಾಹಿಬ್‌ರನ್ನು ಅಗಲಿರುವರು. ಇವರಿಗೆ ಮಕ್ಕಳಿಲ್ಲ. 1972ರಲ್ಲಿ ಕರಾಚಿಗೆ ಶಿಫ್ಟ್ ಆಗಿದ್ದರು. ಅಲ್ಲೇ ತನ್ನ ವ್ಯಾಪಾರವನ್ನು ನಡೆಸುತ್ತಿದ್ದರು. ಅಲ್ಲಿ ವಿವಿಧ ಪದವಿಗಳಲ್ಲಿ ಜಮಾಅತಿನ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಅಸಾಮಾನ್ಯವಾದ ಸೇವೆ ಸಲ್ಲಿಸಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಪಶ್ಚಿಮ ರಬ್ವದ ದಾರುರ್ರಹ್ಮತ್ತಿನ ಚೌಧರಿ ನಬಿ ಬಖ್ಷ್ ಸಾಹಿಬ್‌ರ ಪತ್ನಿಯಾದ ಸರ್‌ದಾರಾನ್ ಬೀಬಿ ಸಾಹಿಬ್‌ರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಗುರುದಾಸ್‌ಪುರ ಜಿಲ್ಲೆಯ ಪಟ್ವಾನ್‌ಕೋಟಿನವರಾಗಿದ್ದರು. ಅನಂತರ ವಲಸೆ ಮಾಡಿ ಪಾಕಿಸ್ತಾನಕ್ಕೆ ಹೋದರು. ಮೊದಲು ಸಿಯಾಲ್‌ಕೋಟ್, ಅನಂತರ ಸಿಂಧ್‌ಗೆ ಹೋದರು. ತಂದೆತಾಯಿ ಮತ್ತು ಕುಟುಂಬ ಪೂರ್ತಿ ಶಿಯಾ ಪಂಗಡದವರಾಗಿರುವರು. 1949ರಲ್ಲಿ ತನ್ನ ಪತಿಯೊಂದಿಗೆ ಅಹ್ಮದಿಯ್ಯತ್ ಸ್ವೀಕಾರ ಮಾಡಿದಾಗ ಅವರ ಹೆತ್ತವರು ಹೇಳಿದರು: ನಿನ್ನ ಪತಿ ಕಾಫಿರ್ ಆಗಿರುವರು. ಆದ್ದರಿಂದ ನೀನು ಅದರಿಂದ ವಾಪಸ್ಸು ಬಾ. ಪತಿಯನ್ನು ಉಪೇಕ್ಷಿಸು. ಆಗ ಅವರು ತನ್ನ ಮನೆಯವರೊಡನೆ ಹೀಗೆ ಹೇಳಿದರು: ಈಗ ನಾನು ಸರಿಯಾದ ಮುಸ್ಲಿಮನಾಗಿರುವೆ. ಮೊದಲು ಅವರೊಂದಿಗೆ ಕೇವಲ ಫಜ್ರ್ ನಮಾಝ್ ಮಾತ್ರ ನಿರ್ವಹಿಸುತ್ತಿದ್ದೆ. ಈಗ ಐದು ಹೊತ್ತಿನ ನಮಾಝ್ ಮಾತ್ರವಲ್ಲ, ತಹಜ್ಜುದ್ ನಮಾಝ್ ಕೂಡ ನಿಯತವಾಗಿ ನಿರ್ವಹಿಸುತ್ತಿರುವೆ. ಆದ್ದರಿಂದ ಮರಳಿ ಬರುವುದಿಲ್ಲ. 14 ವರ್ಷಗಳ ನಂತರ ತನ್ನ ತಂದೆತಾಯಂದಿರನ್ನು ಭೇಟಿಯಾಗಲು ಹೋಗಿದ್ದರು. ಆಗಲೂ ತಂದೆತಾಯಂದಿರು ವಿಮುಖತೆಯಿಂದ ಇದ್ದರು. ಅವರ ಹೃದಯ ಮೃದುಗೊಂಡಿರಲಿಲ್ಲ. ಎಂದಿಗೂ ಮಗಳನ್ನು ಭೇಟಿಯಾಗಲು ಬಂದಿರಲಿಲ್ಲ. ದಿವಂಗತರು ಜಮಾಅತಿನೊಂದಿಗೆ ನೈಜವಾದ ಪ್ರೀತಿಯನ್ನು ಹೊಂದಿದ್ದರು, ಖಿಲಾಫತಿನೊಂದಿಗೆ ಅರ್ಪಣೆಯ ಸಂಬಂಧವನ್ನು ಹೊಂದಿದ್ದರು. ಬಡವರ ನೆರವು ಮಾಡುವ, ಸಾತ್ವಿಕ ಮತ್ತು ನಿಷ್ಠಾವಂತ ಮಹಿಳೆಯಾಗಿದ್ದರು. ದಿವಂಗತರು ವಸಿಯ್ಯತ್ ಮಾಡಿದ್ದರು. ಮೂವರು ಪುತ್ರರನ್ನು ಮತ್ತು ನಾಲ್ವರು ಪುತ್ರಿಯರನ್ನು ಅಗಲಿರುವರು. ಅವರ ಹಿರಿಯ ಮಗನಾದ ಡಾಕ್ಟರ್ ಅಬ್ದುರ್ರಹೀಂ ಸಾಹಿಬ್‌ರಿಗೂ ನುಸ್ರತ್ ಜಹಾನ್ ಯೋಜನೆಯ ಅಧೀನದಲ್ಲಿ ಐದು ವರ್ಷ ಸಿರಲಿಯೋನಿನಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಕಿರಿಯ ಮಗನಾದ ಅಬ್ದುಲ್‌ಖಾಲಿಕ್ ನಯ್ಯರ್ ಸಾಹಿಬ್‌ರು ಕೇಮರೂನಿನನಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದಾರೆ. ಅಲ್ಲಿ ಅವರು ಮಿಶನರಿ ಇಂಚಾರ್ಜ್ ಮತ್ತು ಅಮೀರ್ ಆಗಿ ಕರ್ಮ ಮೈದಾನದಲ್ಲಿ ಸೇವೆಯಲ್ಲಿ ನಿರತರಾಗಿರುವರು. ಆದ್ದರಿಂದ ತಾಯಿಯ ಜನಾಝದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ. ಅಲ್ಲಾಹನು ಎಲ್ಲರಿಗೂ ಸಹನೆ ಮತ್ತು ಧೈರ್ಯವನ್ನು ನೀಡಲಿ. ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ.

---

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಭವಿಷ್ಯವಾಣಿಯು ನಿಜವಾದಾಗ ಮತ್ತು ಅದರ ಎಲ್ಲಾ ಮಹಿಮೆಯೊಂದಿಗೆ ಸರಿಯಾದ ಸಮಯದಲ್ಲಿ ನೆರವೇರಿದಾಗ, ಅದನ್ನು ಸಾಂದರ್ಭಿಕ ಎಂದು ಹೇಳಿ ಅದು ಸುಳ್ಳಾಗಿದೆ ಎಂದು ಹೇಳುವುದು ಅತ್ಯಂತ ಅಸಮಂಜಸ, ನಾಚಿಕೆಯಿಲ್ಲದ, ಅನ್ಯಾಯ ಮತ್ತು ಅಲ್ಲಾಹನ ನಿರ್ಲಕ್ಷ್ಯದ ವಿಷಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ದುರದೃಷ್ಟವಶಾತ್, ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಮಯದಲ್ಲಿ, ಪ್ರಪಂಚದ ಯಾವುದೇ ಪ್ರವಾದಿಯ ಭವಿಷ್ಯವಾಣಿಗಳು ಈ ವ್ಯಾಖ್ಯಾನಗಳಿಂದ ಸ್ಥಾಪನೆಯಾಗುವುದಿಲ್ಲ ಎಂದು ಅವರು ಭಾವಿಸಲಿಲ್ಲ. ಏಕೆಂದರೆ ಇದು ಆಕಸ್ಮಿಕ ಘಟನೆ ಎಂಬ ಭ್ರಮೆಯ ಬಾಗಿಲು ಎಲ್ಲೆಡೆ ತೆರೆದಿರುತ್ತದೆ. ಆದ್ದರಿಂದ ಈ ಅಭಿಪ್ರಾಯವು ನಿಜವಾಗಿದ್ದರೆ, ಎಲ್ಲಾ ಪ್ರವಾದಿಗಳ ಭವಿಷ್ಯವಾಣಿಗೆ ಯಾವುದೇ ಪುರಾವೆಗಳಿಲ್ಲ ಮತ್ತು ಅವೆಲ್ಲವೂ ಸಾದಂರ್ಭಿಕ ಎಂದು ಅವರು ಒಪ್ಪಿಕೊಳ್ಳಬೇಕು.

**ಮುಹಮ್ಮದ್ ಹುಸೇನ್ ದಪ್ಪ ಮತ್ತು ಮೇಲ್ನೋಟದ ವ್ಯಕ್ತಿ ಮತ್ತು ಅವನ ಹೃದಯವು ಅಲ್ಲಾಹನ ನಿಜವಾದ ಜ್ಞಾನದಿಂದ ವಂಚಿತವಾಗಿದೆ**

ಸತ್ಯವೆಂದರೆ ಅಲ್ಲಾಹನ ನಿಜವಾದ ಜ್ಞಾನದಿಂದ ವಂಚಿತರಾದವರ ಹೃದಯದಲ್ಲಿ ಅಂತಹ ಸಂದೇಹಗಳು ಯಾವಾಗಲೂ ಉದ್ಭವಿಸುತ್ತವೆ. ಅವರು ಅಲ್ಲಾಹನ ಕಾರ್ಯಗಳನ್ನು ಆಶ್ಚರ್ಯಚಕಿತರಾಗಿ ಗಾಬರಿಗೊಂಡು ನಿರಾಕರಿಸುತ್ತಾರೆ.

**ಸಾವು ಏಕೆ ಆಕಸ್ಮಿಕವಾಗಿ ಸಂಭವಿಸಿತು ಮತ್ತು ಏಕೆ ಬೇರೆ ಅಪಘಾತ ಸಂಭವಿಸಲಿಲ್ಲ**

ಅಲ್ಲದೆ, ಹಝ್ರತ್ ಮಸೀಹೇ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಾವು ಕೇಳುವುದೇನೆಂದರೆ ಲೇಖ್ ರಾಮ್ ಆಕಸ್ಮಿಕವಾಗಿ ಸಾವನ್ನಪ್ಪಿದ್ದರೆ, ಯಾರೂ ಅವನನ್ನು ಕೊಲ್ಲಲು ಉದ್ದೇಶಿಸದ ಅಪಘಾತವಾಗಿದ್ದರೆ, ನನ್ನ ಉದ್ದೇಶವನ್ನು ಗಳಿಸುವುದರಲ್ಲಿ ವಿಫಲಗೊಳಿಸುತ್ತಿದ್ದನು. ಅಥವಾ ಅವನು ಸಣ್ಣ ಮಟ್ಟದ ಹಲ್ಲೆ ಮಾಡಿದ್ದರೆ ಅದು ಅವನ ಸಾವಿಗೆ ಕಾರಣವಾಗದಿರಬಹುದು. ಹಾಗಾದರೆ ಇತರ ಅಂಶಗಳ ಸಾಂದರ್ಭಿಕತೆಗಳು, ಸಂಭವನೀಯ ನೋಟಕ್ಕೆ ಬರಲಿಲ್ಲ ಮತ್ತು ಈ ಅಂಶಗಳೊಂದಿಗೆ ತೊಂದರೆಗಳನ್ನು ಹೊಂದಿರುವ ಈ ಸಾಂದರ್ಭಿಕತೆಯು ಕಾಣಿಸಿಕೊಳ್ಳಲು ಕಾರಣವೇನು? (ಅದೇ ಪುಟ–111,112)

**ಸತ್ಯದ ವೈರಿ ಮುಹಮ್ಮದ್ ಹುಸೇನ್‌ಗೆ ಬಹುಮಾನದ ಪಂಥಾಹ್ವಾನದ ಹೆಮ್ಮೆಯ ಮಾತುಗಳು**

ಅಲ್ಲದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್

ಹೇಳಿದರು: ಇನ್ನು ಕೆಲವು ಭವಿಷ್ಯವಾಣಿಗಳು ಸುಳ್ಳಾಗಿವೆ ಎಂದು ಈ ಸತ್ಯದ ವೈರಿಯು ನನ್ನ ಮೇಲೆ ಅಪಪ್ರಚಾರ ಮಾಡಿದ್ದಾನೆ. ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪವಿರಲಿ ಎನ್ನುವುದನ್ನು ಬಿಟ್ಟು ಏನು ಹೇಳಲಿ. ಭವಿಷ್ಯವಾಣಿಗೆ ವಿರುದ್ಧವಾಗಿ ಅಂತಹ ಘಟನೆ ಸಂಭವಿಸಿದೆ ಎಂದು ಸಾಬೀತು ಪಡಿಸಿದವರಿಗೆ ಪ್ರತಿ ಭವಿಷ್ಯವಾಣಿಗೆ ನಗದು ನೀಡಲು ನಾವು ಸಿದ್ಧರಿದ್ದೇವೆ. ಆದರೆ ಅವನು ಇದನ್ನು ಕೇಳಿ ವಿಚಾರಣೆಗೆ ಕೇಳುತ್ತಾನೆಯೇ? ಇಲ್ಲ, ಅವನು ತನ್ನ ಅಹಂಕಾರದಿಂದ ಕುರುಡನಾಗಿದ್ದನು. ಈ ವ್ಯಕ್ತಿ ತುಂಬಾ ಭ್ರಷ್ಟ ಮತ್ತು ಸತ್ಯಕ್ಕೆ ಪ್ರತಿಕೂಲ ಎಂದು ನಾನು ತಿಳಿದುಕೊಂಡಿದ್ದೇನೆ, ಅವನಿಗೆ ಇಸ್ಲಾಂ ಧರ್ಮದ ಬಗ್ಗೆ ಕೆಲವು ವಿಶೇಷ ದ್ವೇಷವಿದೆ. ಆತನ ಮನಸ್ಸು ಈ ಸಂದಿಗ್ಧ ಕಾಲದಲ್ಲಿ ಇಸ್ಲಾಮ್ ಧರ್ಮದ ಗೌರವ, ಘನತೆ ವ್ಯಕ್ತವಾಗಬೇಕು ಎಂದು ಬಯಸುವುದಿಲ್ಲ. ಆದರೆ ಇವನು ತನ್ನ ಎಲ್ಲಾ ಕಾರ್ಯಗಳಲ್ಲಿ ವಿಫಲನಾಗುತ್ತಾನೆ. ನನ್ನ ಮಾತು ಕೇಳಿರಿ!! ಇಂದಿನಿಂದ, ಅಲ್ಲಾಹನು ಅನೇಕ ದೃಷ್ಟಾಂತಗಳನ್ನು ತೋರಿಸುತ್ತಾನೆ ಎಂಬುದನ್ನು ನೆನಪಿಡಿ. ಅಂಥವರನ್ನು ಅವಮಾನಿಸುವವರೆಗೂ ಬಿಡುವುದಿಲ್ಲ. (ಅದೇ ಪುಟ 135 ಅಡಿಟಿಪ್ಪಣಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಭವಿಷ್ಯವಾಣಿಯ ಪ್ರಕಾರ "ಅಂತಹ ಜನರನ್ನು ಅವಮಾನಿಸಿ ತೋರಿಸುವವರೆಗೂ ಅಲ್ಲಾಹನು ಬಿಡುವುದಿಲ್ಲ" ಇದರ ಪ್ರಕಾರ ಮುಹಮ್ಮದ್ ಹುಸೇನ್ ತನ್ನ ಜೀವನದುದ್ದಕ್ಕೂ ಅವಮಾನವನ್ನು ಎದುರಿಸಿದನು. ಪ್ರವಾದಿಯ ವಿರುದ್ಧವಾಗಿ ಅವನು ತನ್ನ ಜೀವನದುದ್ದಕ್ಕೂ ಅವಮಾನವನ್ನು ಹೊರತುಪಡಿಸಿ ಏನನ್ನೂ ಗಳಿಸಲಿಲ್ಲ ಎಂದು ನಾವು ಹೇಳಬಹುದು. ಮುಂದಿನ ಸಂಚಿಕೆಯಲ್ಲಿ, ಓದುಗರ ಸೇವೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಪ್ರತಿಫಲದಾಯಕ ಪಂಥಾಹ್ವಾನವನ್ನು ನಾವು ಪ್ರಸ್ತುತಪಡಿಸುತ್ತೇವೆ. **ಇನ್‌ಶಾಅಲ್ಲಾಹ್.**

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ* **01ರ** *ಉಳಿದ ಭಾಗ)*

ಮತ್ತು ಆರಾಧನೆಯಲ್ಲಿ ತೊಡಗಿರು. ಅದರಿಂದ ಆ ವಾಗ್ಧನ ಪೂರ್ಣ ಹಿತದೊಂದಿಗೆ ಪ್ರಕಟವಾಗುವುದು.

ಅದರ ಅರ್ಥ ಬೇರೆ ದಿನಗಳಲ್ಲಿ ಆರಾಧನೆ ಬಿಡಬೇಕೆಂದೇನಲ್ಲ. ಏಕೆಂದರೆ ಈ ವಚನ ಅವತರಿಸಿದ ಸಮಯ ರಸೂಲುಲ್ಲಾಹ್(ಸ) ಆರಾಧನೆ ಮಾಡುತ್ತಿದ್ದರು. ಹಾಗೆ ಅದರ ಅರ್ಥ ಮಾಮೂಲಿಗಿಂತ ಹೆಚ್ಚು ಆರಾಧನೆಯತ್ತ ಗಮನವಿರಲಿ ಎಂದಾಗಿದೆ.

ಕೆಲವು ಮೂಢರು ಈ ವಚನದ ಅರ್ಥ, ಖಾತರಿ ಇಲ್ಲದಿದ್ದರೆ ಆರಾಧನೆ ಕಡ್ಡಾಯವಾಗಿದೆ. ಖಾತರಿಯಾದಾಗ ಆರಾಧನೆ ಮಾಡುವ ಅವಶ್ಯಕತೆ ಇಲ್ಲ. ಏಕೆಂದರೆ ಅಲ್ಲಾಹನು ನುಡಿದಿರುವನು. ಖಾತರಿಯಾಗುವವರೆಗೆ ಆರಾಧನೆ ಮಾಡು. ಈ ಮೂಢರು ಅರಿಯದೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಮೇಲೆ ಆಕ್ರಮಣಗೈಯ್ಯುತ್ತಾರೆ. ಹೀಗೆ ಈ ಅಧ್ಯಾಯ ಅವತರಿಸುವ ತನಕ ಪ್ರವಾದಿ(ಸ) ಅವರಿಗೆ ಪರಿಪೂರ್ಣ ವಿಶ್ವಾಸವಿರಲಿಲ್ಲ. ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಪ್ರವಾದಿತ್ವ ನಂತರವು ವಿಶ್ವಾಸ ಪಡೆದಿರಲಿಲ್ಲ ಎಂದಾದರೆ, ಈ ನಿಕೃಷ್ಟರಿಗೆ ಹೇಗೆ ವಿಶ್ವಾಸ ಉಂಟಾಗುವುದು? "ನೌಝುಬಿಲ್ಲಾಹ್ ಮಿನ್ ಹಾಝಿಹಿಲ್ ಖುರಾಫಾತ್" (ತಫ್ಸೀರ್ ಕಬೀರ್ ಸಂಪುಟ-4 ಪುಟ-117)

ಹುಝೂರ್ ಹೇಳುತ್ತಾರೆ. ಒಂದು ಸಂಧರ್ಭದಲ್ಲಿ ನಾನು ಜುಮುಅ ನಮಾಝ್ ನಿರ್ವಹಿಸಿ ಹೊರ ಬಂದಾಗ ಸೂಫಿಯೊಬ್ಬರು ಹೇಳಿದರು. ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ನಾನು ಹೇಳಿದೆ ಕೇಳಿರಿ. ಅವರು ಹೇಳಿದರು. ವ್ಯಕ್ತಿಯೊಬ್ಬ ಸಮುದ್ರದಲ್ಲಿ ಪ್ರಯಾಣಿಸುತ್ತಾ ದಡಕ್ಕೆ ತಲುಪಿದಾಗ ಅವನು ಹಡಗಿನಲ್ಲೇ ಕುಳಿತುಕೊಳ್ಳಬೇಕೊ ಅಥವಾ ಕೆಳಗಿಳಿಯಬೇಕೊ. ಅವರು ಈ ಪ್ರಶ್ನೆ ಕೇಳಿದಾಕ್ಷಣ ಅಲ್ಲಾಹನು ನನಗೆ ಈ ಪ್ರಶ್ನೆಯ ಉದ್ದೇಶ ತಿಳಿಸಿಕೊಟ್ಟನು. ವಾಸ್ತವದಲ್ಲಿ ಸೂಫಿಯರಿಗೆ ಇಲ್ಲಿ ಮೋಸವಾಗಿದೆ. ಅದರಲ್ಲಿ ಅವರು ಸಿಲುಕಿಕೊಂಡಿದ್ದಾರೆ. ಅವರು ಹೇಳುವುದು. ನಮಾಝ್, ಉಪವಾಸ, ಹಜ್ ಝಕಾತ್ ಇತ್ಯಾದಿ ಹಡಗಿದ್ದಂತೆ (ವಾಹನಗಳಿದ್ದಂತೆ) ಈ ವಾಹನಗಳು ನಮ್ಮನ್ನು ನಮ್ಮ ಪ್ರಿಯತಮನ ಬಾಗಿಲುವರೆಗೆ ತಲುಪಿಸಿಯೂ ವಾಹನದಿಂದ ಕೆಳಗಿಳಿಯದಿದ್ದರೆ ಅವನು ಮೂರ್ಖನೆಂದೇ ಹೇಳಬಹುದು. ಅದೇ ರೀತಿ ವ್ಯಕ್ತಿಯೊಬ್ಬನು ಅಲ್ಲಾಹನ ಸಾನಿಧ್ಯ ಪಡೆದುಕೊಂಡಿದ್ದಾನೆ ಎಂದರೆ ಅವನಿಗೆ ನಮಾಝ್, ರೋಝಾ (ಉಪವಾಸ) ನಿರ್ವಹಿಸುವ ಅಗತ್ಯವಿರುವುದಿಲ್ಲ. ಏಕೆಂದರೆ ಅವನು ಅಲ್ಲಾಹನ ಬಾಗಿಲುವರೆಗೆ ತಲುಪಿರುತ್ತಾನೆ. ಹಾಗೆ ಅವರು ಈ ಪ್ರಶ್ನೆ ಕೇಳಿದಾಕ್ಷಣ ಅಲ್ಲಾಹನು ಅದರ ಎಲ್ಲ ರಹಸ್ಯ ನನಗೆ ಅರುಹಿದನು. ನಾನು ಅವರಿಗೆ ಹೇಳಿದೆ. ಆ ಸಮುದ್ರ ದಡ ಹೊಂದಿದ್ದರೆ ನಿಸ್ಸಂಶಯವಾಗಿ ದಡ ಬಂದ ಮೇಲೆ ಅವನು ಹಡಗಿನಿಂದ ಇಳಿಯಬೇಕು. ಆದರೆ ಆ ಸಮುದ್ರ ಸೀಮಾತೀತವಾಗಿದ್ದರೆ, ಅದರ ದಡವೇ ಇಲ್ಲದಿದ್ದರೆ ನೆನಪಿರಲಿ. ಎಲ್ಲಿ ಅವನು ಇಳಿಯುವನೋ, ಅವನು ಅಲ್ಲೇ ಮುಳುಗಿ ಹೋಗುವನು. ನೀವು ಹೇಳಬೇಕು. ಯಾವ ಸಮುದ್ರದ ಬಗ್ಗೆ ನೀವು ಪ್ರಸ್ತಾಪಿಸಿದ್ದೀರೋ ಅದು ಪರಿಮಿತವಾದುದೇ ಅಥವಾ ಅಪರಿಮಿತವಾದುದೆ. ಹೇಳಿದರು. ಅಪರಿಮಿತವಾಗಿದೆ, ನಾನು ಹೇಳಿದೆ. ಹಾಗಾದರೆ, ಅಪರಿಮಿತ ಸಮುದ್ರದಲ್ಲಿ ಮನುಷ್ಯನು ಯಾವ ಸ್ಥಳದಲ್ಲಾಗಲಿ ಕೆಳಗಿಳಿದರೆ ಮುಳುಗಿ ಹೋಗುವನು. ಹಡಗಿನಲ್ಲಿರುವುದೇ ಅವನ ಸುರಕ್ಷೆಯಾಗಿದೆ.

**(ತಫ್ಸೀರ್ ಕಬೀರ್ ಸಂಪುಟ-7, ಪುಟ-186).**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ವಿಶೇಷ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ. ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

## ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 16 December 2021, Issue No. 50

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 49ರ ವರದಿಯ ಉಳಿದ ಭಾಗ)**

* ಅತಿಥಿಯೋರ್ವರು ಪ್ರಶ್ನೆ ಕೇಳಿದರು. ಲೋಕದಲ್ಲಿ ಬಂದ ಧರ್ಮಗಳೆಲ್ಲ ಸ್ವರ್ಗ ನರಕಗಳ ಬಗ್ಗೆ ಶಿಕ್ಷಣ ನೀಡುತ್ತವೆ. ಅವರಲ್ಲಿ ಕೆಲವರು ಇಂತಹವರು ಇದ್ದಾರೆ. ಅವರು ಒಬ್ಬರಿನ್ನೊಬ್ಬರಿಗೆ ಹತ್ಯೆಯನ್ನು ಮಾಡುತ್ತಾರೆ, ಮತ್ತೊಬ್ಬರ ಕುತ್ತಿಗೆಗಳನ್ನು ಕೊಯ್ಯುತ್ತಾರೆ. ಹುಝೂರ್(ಅತಬಿಅ) ನುಡಿದರು. ಯಾವ ಧರ್ಮವು ಹತ್ಯೆ ಮಾಡುವ ಶಿಕ್ಷಣ ನೀಡಲಿಲ್ಲ. ಅಲ್ಲಾಹನು ಹೇಳಿದ್ದು ಅದೇ ಆಗಿದೆ. ಒಳ್ಳೆಯ ಕಾರ್ಯಗಳನ್ನು ಮಾಡಿರಿ, ಪ್ರತಿಫಲ ದೊರೆಯುವುದು, ಕೆಟ್ಟದ್ದನ್ನು ಮಾಡಿದರೆ ಶಿಕ್ಷೆ ದೊರೆಯುವುದು, ಪವಿತ್ರ ಖುರ್‌ಆನ್ "ಜನ್ನತಾನ್" ಎಂದು ಹೇಳಿದೆ. ಅಂದರೆ ಸತ್ಕರ್ಮ ಮಾಡುವವರಿಗೆ ಇಹಲೋಕದಲ್ಲಿ ಸ್ವರ್ಗವಿದೆ. ಪರಲೋಕದಲ್ಲೂ ಸ್ವರ್ಗವಿದೆ. ಇನ್ನು ಯಾವ ಜನರು ಹತ್ಯೆಯ ಶಿಕ್ಷಣ ನೀಡುವರು, ಮತ್ತೊಬ್ಬರ ಕುತ್ತಿಗೆ ಕೊಯ್ಯುವವರು, ಅವರು ಶೈತಾನನ ಕಾರ್ಯ ಮಾಡುತ್ತಿದ್ದಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನ ಆರಂಭದಲ್ಲಿಯೇ ಅದರ ಸಾದೃಶ್ಯ ಭಾಷೆಯಲ್ಲಿ ಹೇಳಿರುವನು. ಸತ್ಕರ್ಮಗಳನ್ನು ಮಾಡಿದರೆ ಸ್ವರ್ಗ ದೊರೆಯುವುದು. ದುಷ್ಕರ್ಮಗಳನ್ನು ಮಾಡಿದರೆ ಗೊಂದಲ ನಿರ್ಮಿಸುವಿರಿ. ಅದರ ಶಿಕ್ಷೆ ದೊರೆಯುವುದು.

ಹುಝೂರ್(ಅತಬಿಅ) ನುಡಿದರು. ಜಮಾಅತ್ ಸತ್ಕರ್ಮಗಳಿಗಾಗಿ ಪ್ರಯತ್ನಪಡುತ್ತದೆ. ಜಮಾಅತ್ ಶಾಂತಿಯ ಶಿಕ್ಷಣ ನೀಡುತ್ತಿದೆ. ಅದು ನೀಡುತ್ತಿರುವ ಸಂದೇಶ ಅಲ್ಲಾಹನ ಸಂದೇಶವಾಗಿದೆ. ಜಮಾಅತ್ ಮಾನವೀಯತೆಯ ಮೌಲ್ಯಗಳನ್ನು ಸ್ಥಾಪಿಸುತ್ತಿದೆ. ಅಂದ ಹಾಗೆ ಜಮಾಅತಿನ ಸಂದೇಶದಂತೆ ನಡೆಯಿರಿ. ಸತ್ಕರ್ಮಗಳನ್ನು ಕೈಗೊಳ್ಳಿರಿ.

ಹುಝೂರ್(ಅತಬಿಅ) ನುಡಿದರು. ಧರ್ಮ ಒಂದು ವೇಳೆ ಗೊಂದಲ ನಿರ್ಮಿಸುತ್ತಿದೆ ಎಂದಾದರೆ ಜಮಾಅತಿಗೆ ಧರ್ಮ ಎಂದೂ ಗೊಂದಲ ಕಲಿಸಲಿಲ್ಲ. ಜಮಾಅತ್ ಹತ್ಯೆಯ ಶಿಕ್ಷಣ ನೀಡುವುದಿಲ್ಲ. ಬದಲು ಸತತವಾಗಿ ಶಾಂತಿಯ ಶಿಕ್ಷಣವೇ ನೀಡುತ್ತಿದೆ. ಯಾವ ರೀತಿ ದುಷ್ಕರ್ಮಗಳಿಗೆ ಲೌಕಿಕ ಕಾನೂನುಗಳು ಶಿಕ್ಷೆಯನ್ನು ವಿಧಿಸುತ್ತವೆಯೋ ಅದೇ ರೀತಿ ದೇವನಿಯಮವಾಗಿದೆ. ದುಷ್ಕರ್ಮಿಗಳಿಗೆ ಶಿಕ್ಷೆ ದೊರೆಯುವುದು.

* ಮಹಿಳೆಯೋರ್ವಳು ಹೇಳಿದರು. ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿಮ್ಮ ಎಲ್ಲಾ ಏರ್ಪಾಡುಗಳು ಅತ್ಯುತ್ತಮವು, ಉನ್ನತ ಮಟ್ಟದ್ದು ಆಗಿದ್ದವು. ನಾನು ಹುಝೂರ್(ಅತಬಿಅ)ರ ಎಲ್ಲಾ ಭಾಷಣಗಳನ್ನು ಆಲಿಸಿರುತ್ತೇನೆ. ನನ್ನ ಅಭಿಮತವಿದೆ. ಕಿರಿಯರು, ಹಿರಿಯರು ಎಲ್ಲರೂ ಈ ಭಾಷಣಗಳನ್ನು ಆಲಿಸಿದರೆ ಅವರ ಅತ್ಯುತ್ತಮ ತರಬೇತಿ ಆಗುವುದು. ನಾನು ನನ್ನ ಮಕ್ಕಳು, ಮೊಮ್ಮಕ್ಕಳಿಗೋಸ್ಕರ ದುಆ ಮಾಡಲು ಕೋರುತ್ತೇನೆ. ಬಲ್ಗೇರಿಯಾದಲ್ಲಿ ಯಾರಾದರೂ ಇದ್ದರೆ ಅವರಿಗೆ ತರಬೇತಿ ನೀಡಲಿ, ಸುಧಾರಿಸಲಿ. ಏಕೆಂದರೆ ಅವರು ವ್ಯರ್ಥ ಆಗಬಾರದು. * ಆಗ ಹುಝೂರ್(ಅತಬಿಅ) ನುಡಿದರು. ಬಲ್ಗೇರಿಯಾದ ಕಾನೂನು ಅನುಮತಿ ನೀಡುತ್ತಿಲ್ಲ. ಬಲ್ಗೇರಿಯಾದಲ್ಲಿ ಮುಬಲ್ಲಿಗರು ಸಿದ್ಧಗೊಂಡರೆ ಅಲ್ಲೂ ಬರುವರು. ನಾವು ದುಆ ಮಾಡುತ್ತೇವೆ. ನೀವು ದುಆ ಮಾಡಿ, ಅಲ್ಲಾಹನು ಸರಕಾರಕ್ಕೆ ಧಾರ್ಮಿಕ ಸ್ವಾತಂತ್ರ್ಯ ನೀಡುವ ಭಾಗ್ಯ ದಯಪಾಲಿಸಲಿ, ಮೌಲ್ವಿಗಳನ್ನು ಹಿಂಬಾಲಿಸದಿರಲಿ, ಬದಲು ಸತ್ಯವನ್ನು ಗುರುತಿಸಿ ಎಲ್ಲರಿಗೂ ಸ್ವಾತಂತ್ರ್ಯ ನೀಡಲಿ.

* ತಂಡದ ಸದಸ್ಯರೆಲ್ಲರೂ ಹುಝೂರ್(ಅತಬಿಅ) ಅವರ ಭಾಷಣಗಳನ್ನು ತುಂಬ ಮೆಚ್ಚಿದರು. ಲೋಕವು ಹುಝೂರ್(ಅತಬಿಅ)ರ ಮಾತುಗಳಿಗೆ ಕಿವಿಗೊಟ್ಟರೆ ಅದರಂತೆ ನಡೆದುಕೊಂಡರೆ ವಿನಾಶದಿಂದ ಉಳಿಯಬಹುದು.

* Etem ಸಾಹಿಬ್ ತನ್ನ ಕುಟುಂಬ ಸಹಿತ ಜಲ್ಸದಲ್ಲಿ ಭಾಗವಹಿಸಿದರು. ಅವರು ಕೆಲ ವರ್ಷಗಳ ಹಿಂದೆ ಕ್ರೈಸ್ತ ಮತದಿಂದ ಇಸ್ಲಾಮ್ ಸ್ವೀಕರಿಸುವರು. ಅಹ್ಮದಿ ಆಗುವ ಮುಂಚೆ ಕ್ರೈಸ್ತ ಪಂಥ ಒಂದಕ್ಕೆ ಸಂಬಂಧಿಸಿ ಒಳ್ಳೆಯ ನೌಕರಿಯಲ್ಲಿದ್ದರು. ಆದರೆ ಅಹ್ಮದಿ ಆದ ನಂತರ ಎಲ್ಲಾ ಸವಲತ್ತುಗಳನ್ನು ಬಿಟ್ಟು ಅಲ್ಲಿಂದ ಬೇರ್ಪಟ್ಟರು. ಅವರು ಕೆಲ ವರ್ಷ ಹಿಂದೆ ಜಲ್ಸ ಸಾಲಾನ ಯು.ಕೆ ಸಂದರ್ಭದಲ್ಲಿ ಹುಝೂರ್(ಅತಬಿಅ) ಅವರೊಂದಿಗೆ ಭೇಟಿಯಾಗಿ ಬೈಅತ್ ಪಡೆಯುವ ಭಾಗ್ಯ ಪಡೆದಿದ್ದರು. ಆದರೆ ಅವರ ಪತ್ನಿ ಇಸ್ಲಾಮ್ ಸ್ವೀಕರಿಸಿರಲಿಲ್ಲ. ಅವರ ಪತ್ನಿ ಹೇಳುತ್ತಿದ್ದರು ನನಗೆ ಮೂರು ಪುತ್ರಿಯರಿದ್ದಾರೆ, ಒಂದು ಗಂಡು ಮಗು, ಆದರೆ ನಾನು ಅಹ್ಮದಿಯಾಗುವೆನು, ಅವರು ದುಆಗೋಸ್ಕರ ಹುಝೂರ್(ಅತಬಿಅ)ರಿಗೆ ಪತ್ರ ಬರೆದರು. ಮುಂದಿನ ವರ್ಷ ಮತ್ತೊಮ್ಮೆ ಬಂದರು, ಆಗ ಅವರು 7 ತಿಂಗಳಿನ ಗರ್ಭಿಣಿಯಾಗಿದ್ದರು. ಭೇಟಿಯ ಸಂದರ್ಭದಲ್ಲಿ ಅವರು ಮಗುವಿನ ಹೆಸರು ಸೂಚಿಸಲು ವಿನಂತಿಸಿಕೊಂಡರು. ಹುಝೂರ್ ಅನ್ವರ್ ಗಂಡು ಮಗುವಿನ ಹೆಸರು ಮಾತ್ರ ಬರೆದು "ಜಾಹಿದ್" ಎಂದು ಹೆಸರು ಸೂಚಿಸಿದರು.

ಜಲ್ಸದಿಂದ ಮರಳಿ ಬಂದು ಅವರು ಮುಬಲ್ಲಿಗರಿಗೆ ಹೇಳಿದರು. ಡಾಕ್ಟರ್ ಹುಡುಗಿಯಾಗುವುದು ಎಂದಿದ್ದಾರೆ. ಆದುದರಿಂದ ಹುಝೂರ್(ಅತಬಿಅ)ರರಿಗೆ ಹುಡುಗಿಯ ಹೆಸರು ಸೂಚಿಸಲು ಹೇಳಿರಿ.

ಆಗ ಮುಬಲ್ಲಿಗ್ ಸಾಹಿಬ್ ಹೇಳಿದರು. ನೀವು ಹೇಳಿದ್ದೀರಿ. ಗಂಡು ಮಗು ಆದರೆ ಅಹ್ಮದಿ ಆಗುವೆನು ಎಂದು. ಹುಝೂರ್(ಅತಬಿಅ) ಸಹ ಕೇವಲ ಗಂಡು ಮಗುವಿನ ಹೆಸರು ಸೂಚಿಸಿರುವರು. ಆದುದರಿಂದ ಇನ್‌ಶಾಅಲ್ಲಾಹ್ ಗಂಡು ಮಗುವೇ ಆಗುವುದು. ಡಾಕ್ಟರ್‌ಗಳು ತಪ್ಪು ಹೇಳಬಹುದು, ಆಗ ಅವಳು ಹೇಳಿದಳು. ನಾನು ಮೊದಲೇ ಅಹ್ಮದಿಯಾಗಿದ್ದೇನೆ. ನನಗೆ ಈಗ ಯಾವ ಶರತ್ತು ಇಲ್ಲ.

ಅಂದ ಹಾಗೆ ಮಗುವಿನ ಜನನವಾಯಿತು. ಅಲ್ಲಾಹನು ಅವರಿಗೆ ಗಂಡು ಮಗುವೇ ನೀಡಿದನು. ಅವಳು ಜಲ್ಸ ಸಂದರ್ಭದಲ್ಲಿ ಆ ಮಗುವನ್ನು ಜೊತೆಯಲ್ಲಿ ಕರೆ ತಂದಿದ್ದರು ಮತ್ತು ಜನರಿಗೆ ಹೇಳುತ್ತಿದ್ದರು. ಇದು ಖಲೀಫರ ಪ್ರಾರ್ಥನಾ ಸ್ವೀಕಾರದ ಸ್ಪಷ್ಟ ದೃಷ್ಟಾಂತವಾಗಿದೆ.

* Pmario Bikov ಸಾಹಿಬ್ ವೃತ್ತಿಯಿಂದ ವಕೀಲರು, ಅವರು ಸತತ 7 ವರ್ಷಗಳಿಂದ ಈ ಜಲ್ಸದಲ್ಲಿ ಭಾಗವಹಿಸುತ್ತಾ ಬಂದಿದ್ದರು. ಹೇಳುತ್ತಾರೆ. ಇಂದು ಇಸ್ಲಾಮಿನ ನಿಜವಾದ ರೂಪ ಕೇವಲ ಖಲಿಫರು ಹೇಳಬಲ್ಲರು. ಇತರ ಮುಸಲ್ಮಾನರಂತೂ ಇಸ್ಲಾಂ ಧರ್ಮಕ್ಕೆ ಕೆಟ್ಟ ಹೆಸರು ತರುತ್ತಿದ್ದಾರೆ. ಹುಝೂರ್(ಅತಬಿಅ) ಅನ್ವರ್ ಪ್ರಸ್ತುತಪಡಿಸುವಂತಹ ಇಸ್ಲಾಮ್ ಧರ್ಮವೇ ನಿಜವಾದ ಇಸ್ಲಾಮ್ ಧರ್ಮವಾಗಿದೆ. ಲೋಕವು ಇತ್ತ ಗಮನಿಸಬೇಕಾಗಿದೆ.

* ತಂಡದಲ್ಲಿ ಭಾಗವಹಿಸಿದ ಮಹಿಳೆಯೋರ್ವಳು ಹೇಳಿದರು.

"ಖಲೀಫತುಲ್ ಮಸೀಹರ ಮಾತುಗಳು ಕೇವಲ ವೈಯಕ್ತಿಕ ಮತ್ತು ದಾಂಪತ್ತಿಕ ಜೀವನ ಸುಧಾರಿಸಲು ಮಾತ್ರ ನೆರವಾಗುತ್ತಿಲ್ಲ ಬದಲು ಸಮಾಜವನ್ನು ಸಹ ಸುಧಾರಿಸುವ ಭರವಸೆ ಹೊಂದಿದೆ.

* ನವಅಹ್ಮದಿಯಾದ ಸಾಫಿತ್ ಆರಿಷೇಫ್ ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ತನ್ನ ಬಲ್ಗೇರಿಯನ್ ಭಾಷೆಯಲ್ಲಿ ಬರೆದ ಒಂದು ಕವಿತೆಯ ಸಾಲು ಹೀಗಿದೆ.

ನನ್ನ ಪ್ರೀತಿಯ ಪ್ರಭೂ, ನಿನ್ನನ್ನು ಆಯ್ದುಕೊಂಡಿದೆ. ಓ ಮುಹಮ್ಮದ್(ಸ) ರವರ ಗುಲಾಮರೇ! ಈ ಕಾಲಘಟ್ಟದಲ್ಲಿ ಯಾರು ಹಝರತ್ ರಸೂಲುಲ್ಲಾಹ್(ಸ) ರವರ ಚರಿತ್ರೆಯನ್ನು ನೋಡಬಯಸುತ್ತಾರೆ ಅವರು, ಅವರ ಮುಖವನ್ನು ನೋಡಿಕೊಳ್ಳಲಿ. ಓ ನನ್ನ ಪ್ರೀತಿಯ ಹುಝೂರ್(ಅತಬಿಅ) ನಾನು ನಿಮ್ಮ ಕಣ್ಣುಗಳಲ್ಲಿ ಭಾಷ್ಪದ ಒಂದು ಸಣ್ಣ ಹನಿಯನ್ನು ಕಂಡಿದ್ದೆನೆ. ಅದು ನನ್ನ ಹೃದಯದ ಶುಷ್ಕ ಭೂಮಿಯನ್ನು ಹಚ್ಚುಹಸುರಾಗಿಸಿದೆ. ನಿಮ್ಮ ಭಾಷ್ಯಗಳ ಮೂಲಕ ಜರ್ಮನಿಯಲ್ಲಿ ನಾನು ಸ್ವರ್ಗವನ್ನು ಕಂಡಿದ್ದೇನೆ. ನನ್ನ ಹುಝೂರ್(ಅತಬಿಅ) ನೀವು ಎಂತಹ ಪವಾಡ ಮಾಡಿದ್ದೀರೆಂದರೆ ನನ್ನಂತಹ ಬಡವನನ್ನು ಬಲ್ಗೇರಿಯಾದಿಂದ ಹುಡುಕಿಕೊಂಡಿದ್ದೀರಿ. ನಾನು ನಿಮ್ಮ ಈ ಕೃಪೆಗಾಗಿ ಹೃದಯಾಂತರಾಳದಿಂದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಓ ನನ್ನ ಪ್ರೀತಿಯ ಹುಝೂರ್(ಅತಬಿಅ).

* ಬಲ್ಗೇರಿಯಾ ತಂಡದೊಂದಿಗೆ ಹುಝೂರ್(ಅತಬಿಅ)ರ ಈ ಭೇಟಿ 7 ಗಂಟೆಯವರೆಗೆ ನಡೆಯಿತು. ಕೊನೆಯಲ್ಲಿ ಎಲ್ಲಾ ಸದಸ್ಯರು ಸರತಿಯಂತೆ ಹುಝೂರ್(ಅತಬಿಅ)ರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಹುಝೂರ್(ಅತಬಿಅ) ಪ್ರೀತಿಪೂರ್ವಕವಾಗಿ ತಂಡದ ಎಲ್ಲಾ ಸದಸ್ಯರಿಗೆ ಲೇಖನಿ (pen) ನೀಡಿದರು ಮತ್ತು ಬಾಲಕ ಬಾಲಕಿಯರಿಗೆ ಚಾಕ್ಲೇಟ್‌ಗಳನ್ನು ನೀಡಿದರು.

.(ಶೇಷ) **(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.